Sri Y. VEERAPPA (Holenarasipur).—Sir, you were pleased to make some observation regarding the adjournment motion. For heaven's sake, I am not entering into the merits or finding fault with the decision of the esteemed Chair. You were pleased to state that it does not amount to adjudication because of several reasons. Would it not frustrate rule 40 of the VIII Chapter if opportunity is not accorded to discuss this matter—an important matter of recent nature which affects the prestige, honour and safety of our brothers and sisters ?

Mr. SPEAKER.—After all, the Hon'ble Member is trying to over-ride my ruling in an indirect method. I have said that I have disallowed the adjournment motion. There is the end of the matter. If the Hon'ble Member wants to speak on the matter, there is an opportunity because we are going to discuss the Vote on Account.

PAPERS LAID ON THE TABLE.

Sri C. M. POONACHA (Minister for Industries and Home Affairs).—Sir, I beg to lay on the Table the State Transport Undertakings (Mysore) Rules, 1958 issued under Section 68-1 of the Motor Vehicles Act, 1939 (Central Act IV of 1939).

BUDGET FOR 1958-59—DEMANDS FOR GRANTS ON ACCOUNT.

No. 2—Land Revenue

7. Land Revenue

Mr. SPEAKER.—Motion moved :

> "That a sum not exceeding Rs. 50,79,000 be granted 'on account' to the Government to defray the charges which will come in course of payment during the period from 1st April 1958 to end of 31st day of July 1958, in respect of 'Land Revenue'."

Before discussion starts, I must say that members should take that all the Demands are before the House and they may make remarks in respect of all the Demands including the one which I have now put before the House.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ನಾವು ನಿನ್ನೆ ಸೋತಿರತಕ್ಕ ಸರ್ಕಾರ ಈಗ ಮಂಡಿಸಿರತಕ್ಕ 'Vote on Account' ಮೇಲೆ ಮಾತನಾಡಲು ಭಾಗವಹಿಸುವುದಿಲ್ಲ. ನಾವು ಹೊರಟು ಹೋಗುತ್ತೇವೆ. We stage a walk out.

(The Opposition members withdrew from the House.)

Sri V. P. DEENADAYALU NAIDU (Cubbonpet).—Sir, I have a small technical difficulty which I would like to place before you. I want to know whether this Vote on Account is placed before the House under the provisions of Rule 127 of the Rules of Procedure and Conduct of Business of the House. I hope that the vote on account for the period from 1st April to end of July will have to be covered by certain provisions and it is under the provisions of Rule 127 that it is placed before the House. Therefore it is also necessary that it should be circumscribed by Rule 121 relating to demands for grants and so this has to be done in consultation with the Estimates Committee. I would like to know the necessity for placing before this House the vote on account for a period of 4 months. An explanation for the same may kindly be given. I would also like to know the opinion of the Estimates Committee when it was consulted as contemplated by the provisions of Rule 121.

Mr. SPEAKER.—The Estimates Committee is supposed to send the form only.

Sri V. P. DEENADAYALU NAIDU.—I want to know why this piecemeal vote on account is being placed before the House.

Sri S. NIJALINGAPPA (Chief Minister).—I think I have already explained the reasons for adopting this method. This method has been adopted because by that members may have the opportunity of discussing the budget at greater length item by item and department by department when the demands for grants come before the House instead of being required to finish the discussion before the end of

(SRI S. NIJALINGAPPA)

March. The discussion can now go on even during the next month so that there may be a threadbare discussion and members may have more opportunities to discuss the whole thing. I think this was made clear on that day and it was accepted by members.

Sri V. P. DEENADAYALU NAIDU.—If this vote on account is placed before the House under Rule 127, then it is also stated in sub-rule (4) of this rule that "in other respects a motion for vote on account shall be dealt with in the same way as if it were a demand for grant." So this motion for vote on account will have to be governed by Rule 121 also and sub-rule (3) of rule 121 says that "subject to these rules the budget shall be presented in such form as the Government may, in consultation with the Estimates Committee, settle." I would like to know whether this vote on account was settled in consultation with the Estimates Committee and, if so, what is the report of that Committee on the matter.

Mr. SPEAKER.—What that sub-rule says is only this: "Subject to these rules the Budget shall be presented in such form as the Government may, in consultation with the Estimates Committee, settle." So it deals only with the form. The form has already been settled.

Sri V. P. DEENADAYALU NAIDU.—Are we to take it that since the form of the budget has been once decided, that is to be accepted for all time? This is a special case and so it has to be presented in a special form. This vote on account is not the usual procedure. So is it not necessary and incumbent on the part of the Government to consult the Estimates Committee and settle the form?

Sri S. NIJALINGAPPA.—This method has now become universal. Every State is adopting it; the Lok Sabha is adopting it. Even Madras has accepted it. This has been adopted only for giving more opportunities to members to discuss the budget. This is practically a universal method and there is nothing special about it.

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—1958-59ನೇ ಸಾಲಿನ ಪೂರ್ಣ ಆಯವ್ಯಯದ ಅಂದಾಜು ಪಟ್ಟಿಯನ್ನು ವಿಧಾನಸಭೆಯ ಮುಂದೆ ಮಂಡಿಸಿದಮೇಲೆ ನಾಲ್ಕು ತಿಂಗಳಿಗೆ ಮಾತ್ರ Vote on Account ಎಂಬುದಕ್ಕೆ ಈ ಸಭೆಯ ಮಂಜೂರಾತಿಯನ್ನು ಕೇಳುತ್ತಾ ಇರುವುದನ್ನು ನಾನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ. ಕಾರಣವಾದರೂ ಇಷ್ಟೇ. ಆಯವ್ಯಯದ ಅಂದಾಜು ದೀರ್ಘವಾಗಿ ಮತ್ತು ಪರಿಷ್ಕಾರವಾಗಿ ಚರ್ಚೆಯಾಗಬೇಕಾದುದು ಅಗತ್ಯ. ಪ್ರತಿಯೊಂದು ಬಡ್ಜೆಟ್ ಅಧಿವೇಶನದಲ್ಲೂ ಈ ಬಗ್ಗೆ ಮಾತನಾಡಲು ಸಾಕಷ್ಟು ಕಾಲವಿಲ್ಲ. ಎಷ್ಟೋ ವಿಚಾರಗಳು ಚರ್ಚೆಯಾಗಬೇಕಾಗುತ್ತದೆ. ಸಾರ್ವಜನಿಕರ ಅಭಿಪ್ರಾಯವನ್ನು ಈ ಸಭೆಯಲ್ಲಿ ವ್ಯಕ್ತಪಡಿಸಬೇಕಾದ ಅಗತ್ಯವಿದೆ ಎನ್ನುವ ವಾದವನ್ನು ನಾವು ಕೇಳುತ್ತಲೇ ಇದ್ದೇವೆ. ನಾನಾದರೂ ಈ "Vote on Account" ಇಲ್ಲಿ ಮಂಡಿಸಿದ ನಂತರದಲ್ಲಿ 58-59ನೇ ಸಾಲಿನ ಆಯವ್ಯಯದ ಅಂದಾಜನ್ನು ಆಮೂಲಾಗ್ರವಾಗಿ ಚರ್ಚೆಮಾಡುವುದಕ್ಕೆ ಏರ್ಪಾಡುಮಾಡಿರುವುದು ಬಹಳ ಒಳ್ಳೆಯ ಕ್ರಮವೆಂದು ಈ ಸಭೆಯಲ್ಲಿ ಅಭಿಪ್ರಾಯಪಡುತ್ತೇನೆ. ಆದರೆ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರುವುದು ಅಗತ್ಯವಿದೆ. 1957-58ನೇ ಇಸವಿಯಲ್ಲಿ ಈ ಸಭೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ ಕಮಿಟಿಗಳನ್ನು ರಚಿಸಿತು. ಈ ಸಭೆಯ ಮುಂದೆ ಆಯವ್ಯಯದ ಅಂದಾಜನ್ನು ಇಡುವುದು, ಮತ್ತೆ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ ಕಮಿಟಿಗಳನ್ನು ರಚನೆಮಾಡುವುದು, ಈ ವಿಧಾನಸಭೆ ಸರ್ಕಾರದ ಹಣಕಾಸಿನ ವಿಚಾರದಲ್ಲಿಯೂ, ಆಡಳಿತ ವಿಚಾರದಲ್ಲಿಯೂ ನೇರವಾಗಿ ತನ್ನ ಹಿಡಿತವನ್ನುಪಯೋಗಿಸುವುದಕ್ಕೆ ಅದು ಒಂದು ಸಾಧನ. 1957-58ನೇ ಸಾಲಿನಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯಾಗಲೀ, ಎಸ್ಟಿಮೇಟ್ಸ್ ಕಮಿಟಿಯಾಗಲೀ ಸೇರಲೇ ಇಲ್ಲ. ಬಹುಶಃ ನನಗೆ ತಿಳಿದಮಟ್ಟಿಗೆ ಅದು ಸೇರಲಿಲ್ಲ. ಅದು ತುಂಬಾ ವಿಷಾದಕರವಾದಂಥ ಪ್ರಸಂಗ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಹಿಂದೆ ಈ ಸ್ವರಾಜ್ಯ ಬರುವುದಕ್ಕೆ ಮುಂಚಿತವಾಗಿದ್ದಂಥ ನ್ಯಾಯವಿಧಾಯಕ ಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಬಹುಶಃ ಆ ಕಾಲದಲ್ಲಿ ಎಸ್ಟಿಮೇಟ್ಸ್ ಕಮಿಟಿಯೂ ಇರಲಿಲ್ಲವೆಂದು ಕಾಣುತ್ತದೆ.

11 A.M.

ಆ ಕಾಲದಲ್ಲೇನಾದರೂ ಹೀಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಸೇರದೆ ಇರುವಂಥ ಪ್ರಸಂಗ ಬಂದಿದ್ದರೆ ಅವರು ಎಷ್ಟು ಕಟುವಾಗಿ ಟೀಕೆ ಮಾಡುತ್ತಿದ್ದರೆಂಬುದನ್ನು ನನಗೆ ಊಹಿಸಲು ಕಷ್ಟವಾಗಿದೆ. ಏಕೆ ಈ ರೀತಿ ಉಪೇಕ್ಷೆ ಮಾಡಿದ್ದಾರೆನ್ನುವುದು ನನ್ನ ಅರಿವಿಗೆ ನಿಲುಕದ ಅಂಶವಾಗಿದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿಗಳವರು, ಈ ಸಭೆಯವರು ಮಂಜೂರು ಮಾಡಿದ ಹಣ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ, ಯಾವ ಉದ್ದೇಶಕ್ಕಾಗಿ ಹಣವನ್ನು ಮಂಜೂರು ಮಾಡಿದ್ದಾರೆಯೋ ಅದಕ್ಕಾಗಿಯೇ ಆ ಹಣ ಖರ್ಚಾಗುತ್ತಿದೆಯೇ ಅಥವ ಇಲ್ಲವೇ, ಅದರಲ್ಲಿ ಏನಾದರೂ ದುಂದು ವೆಚ್ಚವಿದೆಯೇ, ಕ್ರಮವರಿತು ಸರ್ಕಾರದ ಹಣ ಖರ್ಚಾಗುತ್ತಿದೆಯೇ, ಇಲ್ಲವೇ ಎನ್ನುವುದನ್ನು ಅರಿಯಬೇಕಾದರೆ ಪ್ರತಿಯೊಂದು ಬಡ್ಜೆಟ್ ಅಧಿವೇಶನಕ್ಕೆ ಮುಂಚೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ಮತ್ತು ಎಸ್ಟಿಮೇಟ್ಸ್ ಕಮಿಟಿಯ ವರದಿಗಳನ್ನು ಈ ಸಭೆಗೆ ಸಲ್ಲಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ

ವಾಗಿತ್ತು. ಆ ರೀತಿ ಮಾಡದೆ ಇರುವುದು ಒಂದು ಕರ್ತವ್ಯ ಲೋಪವಾಗಿದೆ, ಕ್ಷಮಾರ್ಹವಾದ ಲೋಪವಲ್ಲವೆಂದು ಹೇಳುತ್ತೇನೆ. ನಾವು ಸಾರ್ವಜನಿಕರ ಪ್ರತಿನಿಧಿಗಳು. ಸಾರ್ವಜನಿಕ ಪ್ರತಿನಿಧಿಗಳಾಗಿ ಬಂದು ದೇಶದ ಆಡಳಿತ ನಡೆಸುವಾಗ ಅದು ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾದುದು ನಮ್ಮ ಕರ್ತವ್ಯ.

1947ರಿಂದೀಚೆಗೆ ಈ ದೇಶಕ್ಕೆ ಸ್ವರಾಜ್ಯ ಬಂದ ಮೇಲೆ ನಾವೇ ನಮ್ಮ ಆಡಳಿತವನ್ನು ನಡೆಸಿಕೊಳ್ಳುವುದಕ್ಕೆ ನಾವು ನಡೆಸುವಂಥ ಆಡಳಿತಕ್ಕೆ ನಾವೇ ಜವಾಬ್ದಾರರು ಎಂದು ನಮ್ಮ ಮೇಲೆ ಜವಾಬ್ದಾರಿ ಬಂದಮೇಲೆ ಸಾರ್ವಜನಿಕಾಭಿಪ್ರಾಯ ಸರಿಯಾದ ರೀತಿಯಲ್ಲಿ ವ್ಯಕ್ತವಾಗುತ್ತಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಆಳುವ ಪಕ್ಷದ ಸದಸ್ಯರಾದ ನಮ್ಮ ಮೇಲೆ ಒಂದು ಮಿತಿ ಇದೆ. ನಾವು ಮಾಡುವ ಟೀಕೆಗಳ ಮೇಲೆ ಒಂದು ಮಿತಿ ಇದೆ. ನಾವು ಮಿತಿಮೀರಿದ ಟೀಕೆ ಮಾಡುವ ಹಾಗಿಲ್ಲ. ವಿರೋಧ ಪಕ್ಷದವರು ಈಗ ಇಲ್ಲದಿರುವುದರಿಂದ ಅವರ ವಿಚಾರದಲ್ಲಿ ಟೀಕೆ ಮಾಡುವುದಕ್ಕೆ ಇಷ್ಟವಿಲ್ಲ. ಅವರು ಇದ್ದಿದ್ದರೆ ಆ ವಿಚಾರದಲ್ಲಿಯೂ ಕೂಡ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆ. ಪ್ರಜಾಪ್ರಭುತ್ವಾಡಳಿತ ಪದ್ಧತಿಯಲ್ಲಿ ಆಡಳಿತ ಪಕ್ಷಕ್ಕೆ ಒಂದು ವಿರೋಧ ಪಕ್ಷ ಅಗತ್ಯ. ನಾವು ನಮ್ಮ ರೂಪವನ್ನು ನೋಡಿಕೊಳ್ಳಬೇಕಾದರೆ ಕನ್ನಡಿ ಹೇಗೆ ಅಗತ್ಯವೋ ಅದೇ ರೀತಿಯಲ್ಲಿ ನಮ್ಮ ಆಡಳಿತ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕಾದರೆ ಎಚ್ಚರವಾಗಿರತಕ್ಕ, alert ಆಗಿರುಕ್ಕ ವಿರೋಧ ಪಕ್ಷ ಅಗತ್ಯವಾಗಿ ಬೇಕು. ಈಗ ಆ ರೀತಿಯ ವಿರೋಧ ಪಕ್ಷ ಇದೆಯೇ ಇಲ್ಲವೇ ಎನ್ನುವ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ನನ್ನ ಮಾನ್ಯ ಸ್ನೇಹಿತರಾದ ವಿರೋಧ ಪಕ್ಷದ ಸದಸ್ಯರು ಈ ಸಭೆಯಲ್ಲಿಲ್ಲದೆ ಇರುವಾಗ ಅವರ ವಿಚಾರದಲ್ಲಿ ಒಂದು ಟೀಕೆಯನ್ನು ಮಾಡಿದಂಥ ಅಪವಾದಕ್ಕೆ ಗುರಿಯಾಗುತ್ತೇನೆ ಎನ್ನುವ ಭಯದಿಂದ ಟೀಕೆ ಮಾಡುವುದಿಲ್ಲ.

ಆಡಳಿತವಾದರೂ ಸರಿಯಾಗಿ ನಾವು ನಿರೀಕ್ಷಿಸಿದ ರೀತಿಯಲ್ಲಿ ಆ ವೇಗದಲ್ಲಿ ನಡೆಯುತ್ತಿದೆಯೇ ಎಂದರೆ ಅದೂ ಇಲ್ಲ. ಅಧಿಕಾರವರ್ಗ ಯಾವ ರೀತಿಯಲ್ಲಿ ಹೆಜ್ಜೆ ಹಾಕುತ್ತಿದೆ ಎಂದರೆ ಅದನ್ನು ಇಲ್ಲಿ ವ್ಯಕ್ತಪಡಿಸುವುದು ಕೂಡ ಕಷ್ಟ. ಸರ್ಕಾರ ಒಂದು ರೀತಿಯಲ್ಲಿ ಹೋಗುತ್ತಿದ್ದರೆ ಅಧಿಕಾರವರ್ಗ ಇನ್ನೊಂದು ರೀತಿಯಲ್ಲಿ ಹೋಗುತ್ತಿದೆ. ಬರುಬರುತ್ತ ಸರ್ಕಾರದ ಹಿಡಿತ ಅಧಿಕಾರ ವರ್ಗದಮೇಲೆ ಬಹುಮಟ್ಟಿಗೆ ಕಡಮೆಯಾಗಿದೆ ಅದಕ್ಕೆ ನೂರೆಂಟು ಕಾರಣಗಳಿವೆ. ಹಿಂದೆ ಇದ್ದಂಥ set upನಲ್ಲಿ ಒಬ್ಬ ಡೆಪ್ಯುಟಿ ಕಮೀಷನರು ಅಮಲ್ದಾರರ ಮೇಲೆ ಅವರು ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಒಂದು ಕಾಗದ ಬರೆದರೆ ಅಲ್ಲಿಗೆ ಮುಗಿದು ಹೋಗುತ್ತಿತ್ತು. ಅವರಿಗೆ ಪ್ರಮೋಷನ್ ವಗೈರೆ ಸಿಕ್ಕುವ ಹಾಗೆಯೇ ಇರಲಿಲ್ಲ. ಈಗ ಹಾಗಿಲ್ಲ. ಡೆಪ್ಯುಟಿ ಕಮೀಷನರು ಏನಾದರೂ ಬರೆದರೆ, ಅವರು ಹಾಗೆ ಬರೆದದ್ದು ಸರಿ ಎನ್ನುವುದಕ್ಕೆ ಅವರೇ ರುಜುವಾತು ಕೊಡಬೇಕು. ಅದಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಹೋಗಬೇಕು, ಹೀಗೆ ನೂರೆಂಟಿವೆ. ಹೀಗಾಗಿರುವುದರಿಂದ ಮೇಲ್ಪಟ್ಟ ಅಧಿಕಾರಿಗಳ ಹಿಡಿತ ಅವರ ಕೈಕೆಳಗೆ ಕೆಲಸ ಮಾಡುವವರ ಮೇಲೆ ಏನೇನೂ ಇಲ್ಲದ ಹಾಗೆ ಆಗಿದೆ. ಇದೂ ಅಲ್ಲದೆ ಇನ್ನೂ ಅನೇಕ ಕಾರಣಗಳಿಂದ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸುವುದಕ್ಕೆ ಅಡಚಣೆಯಾಗಿದೆ. ಅಲ್ಲದೆ ಅನೇಕ ಅಧಿಕಾರಿಗಳಿಗೆ ಅವರು ಮಾಡಬೇಕಾದ ಕೆಲಸಗಳಲ್ಲಿ ನಂಬಿಕೆಯೇ ಇಲ್ಲ. ಸರ್ಕಾರದ ಕೆಲಸದಲ್ಲಿ ಅಡಚಣೆಯಾಗುವುದಕ್ಕೆ ಇದೂ ಒಂದು ಬಲವತ್ತರವಾದ ಕಾರಣವಾಗಿರಬಹುದು. ಅನೇಕ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೆ ಬದಲಾಗಿ, ಅವರು ಯಾವ ಕರ್ತವ್ಯವನ್ನು ಮಾಡಬೇಕೋ ಅದನ್ನು ಬಿಟ್ಟು ಬೇರೆ ಕೆಲಸಗಳಲ್ಲಿ ತೊಡಗಿರುತ್ತಾರೆ. ಹೀಗಾಗಿ ದೇಶದಲ್ಲಿ ಆಡಳಿತ ಎಷ್ಟು ವೇಗದಿಂದ ಹೋಗಬೇಕೆಂದು ನಾವು ನಿರೀಕ್ಷೆ ಮಾಡಿದ್ದೆವೋ, ಈ ದೇಶವನ್ನು ಪುನರ್ರಚನೆ ಮಾಡಬೇಕಾದರೆ, ದೇಶವನ್ನು ಸುಭದ್ರವಾಗಿ ಕಟ್ಟಬೇಕಾದರೆ ಯಾವ ರೀತಿಯ ಆಡಳಿತ ನಡೆಯಬೇಕೆಂದು ನಿರೀಕ್ಷೆ ಮಾಡಿದ್ದೆವೋ ಆ ನಿರೀಕ್ಷೆ ನಮಗೆ ಈಡೇರುತ್ತಿಲ್ಲ. ಹೀಗಾಗಿ ದೇಶದಲ್ಲಿ ಆಡಳಿತ ಸರಿಯಾಗಿ, ಸಾಕಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲವೆಂದರೆ, ನಾವು ನಮ್ಮ ಪಕ್ಷವನ್ನೇ ಟೀಕೆಮಾಡಿಕೊಂಡೆವು ಎಂದು ಯಾರೂ ಭಾವನೆ ಮಾಡಬಾರದು. ಇದನ್ನು ಅತ್ಯಗತ್ಯವಾಗಿ ಹೇಳಬೇಕಾಗಿದೆ.

ವೋಟ್ ಆನ್ ಅಕೌಂಟ್‌ನಲ್ಲಿ ನಾಲ್ಕು ತಿಂಗಳಿಗೆ ಮಾತ್ರ ಹಣವನ್ನು ಕೇಳಿದ್ದಾರೆ. ಪ್ರತಿಯೊಂದು ಬಾಬೂ ಕೂಡ ಚರ್ಚೆಯಾಗುತ್ತದೆ. ಆದುದರಿಂದ ಈಗ ವಿವರವಾಗಿ ಪ್ರತಿಯೊಂದು ಬಾಬಿನ ಮೇಲೂ ಕೂಡ ನಾವು ಹೇಳಬೇಕಾಗಿಲ್ಲ. ಸಾಮಾನ್ಯವಾಗಿ Vote on Account ಎಂದರೆ ಎಲ್ಲಿಯೂ ಕೂಡ ಒಂದೆರಡು ದಿನದಲ್ಲಿ ಮಂಜೂರಾತಿ ದೊರಕುತ್ತದೆ. ಸರ್ಕಾರ ನಡೆಯುವುದಕ್ಕೆ ಒಂದು ಏರ್ಪಾಡನ್ನು ನಾವು ಮಾಡತಕ್ಕದ್ದು. ಸರ್ಕಾರದ ರೀತಿ ನೀತಿಯ ಬಗ್ಗೆ ಚರ್ಚೆ ಮಾಡುವ ಸಂದರ್ಭ ಬೇರೆ ಬರುತ್ತದೆ. ಈ ಸಂದರ್ಭದಲ್ಲಿ ನನ್ನ ಮನಸ್ಸಿನ ಮೇಲೆ ಬಹಳ ಯಾತನೆಯನ್ನುಂಟುಮಾಡುತ್ತಿರುವ ವಿಚಾರವೆಂದರೆ ಮಾನ್ಯ ಶ್ರೀ ಮರಿಯಪ್ಪನವರು ಅರ್ಥಿಕ ಮಂತ್ರಿಗಳಾಗಿದ್ದೂ ಎಸ್ಟಿಮೇಟ್ಸ್ ಕಮಿಟಿ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ಈ ಎರಡರ ವರದಿ ನಮ್ಮ ಕೈಸೇರಲಿಲ್ಲವಲ್ಲ ಎನ್ನುವುದು. ಈ ವಿಷಯದಲ್ಲಿ ನನ್ನ ವಿಷಾದವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿರತಕ್ಕದ್ದು ಬಹಳ ಪ್ರಾಮುಖ್ಯವಾದ ವಿಚಾರ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿ ಇವೆರಡೂ watch dogs of the House over Governmental Expenditure. ಸಾಮಾನ್ಯವಾಗಿ ಈ ಎರಡು ಸಮಿತಿಗಳೂ ಕೆಲಸಮಾಡಬೇಕು ಎನ್ನುವುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಈ ವರ್ಷ ಸ್ವಲ್ಪ ಪ್ರೊಸೀಜರ್‌ನಲ್ಲಿ ಬದಲಾವಣೆಯಾಗಿದೆ. ಬೊಂಬಾಯಿನಲ್ಲಿ ಅರ್ಥಿಕ ಮಂತ್ರಿಗಳು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಚೇರ್‌ಮನ್ ಆಗಿದ್ದಾರೆ. ಹಳೇ ಮೈಸೂರಿನಲ್ಲಿಯೂ ಅದೇ ಸಂಪ್ರದಾಯವನ್ನು ನಾವು ಇಟ್ಟುಕೊಂಡು ಬಂದೆವು. ಆದರೆ ಈಗ ಅದನ್ನು ಸಂಪೂರ್ಣವಾಗಿ ಸ್ವತಂತ್ರವಾದುದನ್ನಾಗಿ ಮಾಡಬೇಕೆಂದು ನಮ್ಮ ಅಧ್ಯಕ್ಷರು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಖಾಸಗಿ ಸದಸ್ಯರನ್ನೇ ಚೇರ್‌ಮನ್ ಆಗಿ ಮಾಡಿದ್ದಾರೆ. ಇನ್ನೊಂದು ವಿಷಯವನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿ ಇವೆರಡೂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿರತಕ್ಕ ಈ ಸಭೆಯ ಉಪ ಸಮಿತಿಗಳು. ನನಗೆ ಅವುಗಳ ಮೇಲೆ ಯಾವ ವಿಧವಾದ ಹತೋಟಿಯೂ ಇಲ್ಲ. ಎಸ್ಟಿಮೇಟ್ಸ್ ಕಮಿಟಿ ಸೇರುವುದಕ್ಕಾಗಲಿಲ್ಲವಲ್ಲ ಎಂದು ನಾನೂ ಸಹ ನೊಂದುಕೊಂಡೆ. ಬಡ್ಜೆಟ್

(ಶ್ರೀ ಟಿ. ಮರಿಯಪ್ಪ)

ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಮೊದಲು ಪಬ್ಲಿಕ್ ಅಕೌಂಟ್ಸ್ ಕಮಿಟಿ ಸೇರಿ ಅದರ ವರದಿಯನ್ನು ಸಭಾಸದರಿಗೆ ಕೊಡಬೇಕಾಗಿತ್ತು. ಆದರೆ ಅದಕ್ಕೆ ಖಾಸಗಿ ಸದಸ್ಯರು ಅಧ್ಯಕ್ಷರಾಗಿರುವುದರಿಂದ ನನ್ನ ಹತೋಟಿ ಅದರ ಮೇಲಿಲ್ಲ. ಈ ಸಮಿತಿಯ ಚೇರ್‌ಮನ್ ಅವರು ಸಭಾಧ್ಯಕ್ಷರನ್ನು consult ಮಾಡಿ ಮೀಟಿಂಗ್ ಕರೆಯಬೇಕಾಗಿತ್ತು. ಸರ್ಕಾರಕ್ಕೆ ಈ ವಿಷಯದಲ್ಲಿ ಎಳ್ಳಷ್ಟೂ ಜವಾಬ್ದಾರಿ ಇಲ್ಲವೆಂದು ಮನವಿ ಮಾಡಿಕೊಳ್ಳುತ್ತೇನೆ. ಅವರುಗಳು ಮೀಟಿಂಗ್ ಕರೆದಿದ್ದರೆ ನಾವು ಅವರಿಗೆ ಬೇಕಾದ ಸಹಾಯವನ್ನೆಲ್ಲ ಕೊಡುವುದಕ್ಕೆ ತಯಾರಾಗಿದ್ದೆವು. ಈ ಮಾನ್ಯ ಸಭೆಯ ಮೂಲಕ ನಾನು ಅಧ್ಯಕ್ಷರನ್ನು ಪ್ರಾರ್ಥನೆ ಮಾಡುವುದೇನೆಂದರೆ ದಯವಿಟ್ಟು, ಅದಷ್ಟು ಬೇಗ ಈ ಸಮಿತಿಯ ಮೀಟಿಂಗನ್ನು ಕರೆಯಬೇಕು. ಅಧಿವೇಶನ ನಡೆಯುವ ಕಾಲದಲ್ಲಿಯೇ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸೇರಿ, ಪ್ರತಿದಿನವೂ ಸೇರಿ ಆಡಿಟ್ ರಿಪೋರ್ಟ್ ವಗ್ಗೈರೆ ಅವರ ಮುಂದಿಟ್ಟು ಸಮಿತಿಯವರ ಅಭಿಪ್ರಾಯವನ್ನು ಈ ಸಭೆ ಮುಕ್ತಾಯವಾಗುವುದರೊಳಗಾಗಿ ಸಭೆಯ ಮುಂದೆ ಮಂಡಿಸುವಂತೆ ಏರ್ಪಾಡುಮಾಡಬೇಕು. ಮರಿಯಪ್ಪನವರು ಇದ್ದೂ ಹೀಗೇಕೆ ಮಾಡಿದರು ಎಂದು ಸಭಾಸದಸ್ಯರು ಕೇಳುತ್ತಾರೆಂದು ನನಗೆ ಗೊತ್ತಿತ್ತು. ಆದರೆ ಸಮಿತಿಯ ಮೀಟಿಂಗನ್ನು ಕರೆಯದೆ ಇದ್ದುದಕ್ಕೆ ನಾನೂ ಜವಾಬ್ದಾರನಲ್ಲ, ಹಣಕಾಸಿನ ಶಾಖೆಯೂ ಜವಾಬ್ದಾರಿಯಲ್ಲ. ಇದು ಸಂಪೂರ್ಣ ಸ್ವತಂತ್ರ ಸಂಸ್ಥೆಯಾದುದರಿಂದ ಸಮಿತಿಯ ಅಧ್ಯಕ್ಷರೂ ಮತ್ತು ಈ ಸಭಾಧ್ಯಕ್ಷರೂ ಮಾಡಬೇಕಾದ ಕಾರ್ಯ. ಆದಷ್ಟು ಬೇಗನೆ ಈ ಸಮಿತಿಯನ್ನು ಕರೆಯಬೇಕಾದ್ದು ಅಗತ್ಯವಾದದ್ದು. ಇದರಲ್ಲಿ ಕರ್ತವ್ಯಲೋಪವಾಗುವುದಿಲ್ಲವೆಂದು ನಂಬಿದ್ದೇನೆ.

ಅಧ್ಯಕ್ಷರು.—ನಾನೂ ಸಹ ಇದಕ್ಕೆ ಸ್ವಲ್ಪ ಜವಾಬ್ದಾರನಾಗಿದ್ದೇನೆ. ಇದರಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಟಿ. ಮರಿಯಪ್ಪನವರ ಜವಾಬ್ದಾರಿ ಏನೂ ಇಲ್ಲ. ನಾನು ಈ ಬಗ್ಗೆ ಎರಡಾವರ್ತಿ ಪ್ರಯತ್ನ ಮಾಡಿದೆ. ಆದರೆ ಹಾಗೆ ನಾನು ಒಂದಲ್ಲಾ ಎರಡು ಸಾರಿ ಪ್ರಯತ್ನ ಪಟ್ಟಾಗ್ಯೂ ಆ ಸಮಿತಿ ಒಂದಲ್ಲಾ ಒಂದು ಕಾರಣದಿಂದ ಸೇರಲು ಸಾಧ್ಯವಾಗಲಿಲ್ಲ. ಈ ವಿಚಾರವಾಗಿ ನಾನು ಅಕೌಂಟೆಂಟ್ ಜನರಲ್ ಅವರನ್ನು ಸಹ ಭೇಟಿ ಮಾಡಿದ್ದೇನೆ. ಅವರು "ನಾವೂ ನೀವು ಇಬ್ಬರಲ್ಲೇ ಒಂದು ಕಡೆ ಸೇರಿ ಈ ವಿಚಾರವನ್ನು ಚರ್ಚೆ ಮಾಡಿ ಆದಷ್ಟು ಬೇಗ ಪಬ್ಲಿಕ್ ಅಕೌಂಟ್ಸ್ ಕಮಿಟಿಯನ್ನು ಕರೆಯೋಣವೆಂದು ಹೇಳಿದ್ದಾರೆ. ಆ ರೀತಿ ಆದಷ್ಟು ಬೇಗ ಆ ಸಮಿತಿಯನ್ನು ಕರೆಯಲು ಪ್ರಯತ್ನ ಮಾಡುತ್ತೇನೆ.

*ಶ್ರೀ ಎ. ಮುನಿರಾಜು (ಚಿಕ್ಕಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಈ ದಿವಸ ಓಟ್ ಆನ್ ಅಕೌಂಟ್ ಬಡ್ಜೆಟ್ ಪಟ್ಟಿಯನ್ನು ಸರ್ಕಾರದವರು ಸಭೆಯ ಮುಂದಿಟ್ಟು ಇದರಮೇಲೆ ಚರ್ಚೆ ಮಾಡಬೇಕೆಂದು ತಿಳಿಸಿದ್ದಾರೆ. ಆದರೆ ಈಗಾಗಲೇ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಸರ್ಕಾರಿ ಆಡಳಿತ ಯಂತ್ರ ಸಡಿಲವಾಗಿ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳು ಎಷ್ಟು ವೇಗವಾಗಿ ನಡೆಯಬೇಕೋ ಎಷ್ಟು ಸಮರ್ಪಕವಾಗಿ ನಡೆಯಬೇಕೋ ಅಷ್ಟು ಆಗುತ್ತಿಲ್ಲವಾದುದರಿಂದ ಬೇಗ ಅದನ್ನು ಉತ್ತಮಗೊಳಿಸಬೇಕೆಂದು ಹೇಳಿದ್ದಾರೆ. ಆದುದರಿಂದ ನಾನಿನ್ನು ಈ ವಿಚಾರವನ್ನು ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ. ನಮಗೆ ಸ್ವಾತಂತ್ರ್ಯ ಬಂದಮೇಲೆ ನಾವು ಒಂದು ಹೆಚ್ಚಿನ ವೇಗದಲ್ಲಿ ಒಂದು ಒಳ್ಳೆಯ ಬುನಾದಿಯ ಮೇಲೆ ನಮ್ಮ ದೇಶದ ಅಭ್ಯುದಯವನ್ನು ಸಾಧಿಸತಕ್ಕಂಥ ರೀತಿಯಲ್ಲಿ ನಮ್ಮ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂದಿದ್ದೆವು. ಆದರೆ ಈ ಕಾರ್ಯಗಳು ನಾವು ಆಶಿಸಿದ್ದ ರೀತಿಯಲ್ಲಿ ನಡೆಯಲಿಲ್ಲ. (ಸದುದ್ದೇಶದಿಂದಲೋ ಅಥವಾ ಮತ್ತೆ ಯಾವ ಉದ್ದೇಶದಿಂದಲೋ) ಇಲ್ಲಿಯವರೆಗೂ ಆದದ್ದಾಯಿತು. ಇನ್ನು ಮುಂದಕ್ಕಾದರೂ ಇಂಥ ದೋಷಾರೋಪಣೆಗಳಿಗೆ ಅವಕಾಶ ಕೊಡದ ರೀತಿಯಲ್ಲಿ ನಮ್ಮ ಸರ್ಕಾರಿ ಆಡಳಿತವರ್ಗ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳನ್ನು ಚಟುವಟಿಕೆಯಿಂದ ನಡಸಲು ತಕ್ಕ ಏರ್ಪಾಡುಗಳನ್ನು ಮಾಡುತ್ತಾರೆಂದು ಭಾವಿಸುತ್ತೇನೆ.

ಇನ್ನು ಪ್ರಜಾಪ್ರಭುತ್ವಾಡಳಿತದಲ್ಲಿ ಯಾವತ್ತೂ ಒಂದು ವಿರೋಧಪಕ್ಷವಿರಬೇಕಾದುದು ಅತ್ಯಾವಶ್ಯಕ. ಆದರೆ ಅದೊಂದು ಸುವ್ಯವಸ್ಥಿತವಾದ ಪಕ್ಷವಾಗಿರಬೇಕು. ದೇಶದ ಒಂದು ಆಗು-ಹೋಗುಗಳೇನಿವೆಯೋ ಅದನ್ನು ನಿರ್ಧರಿಸಲು ಸರ್ಕಾರಕ್ಕೆ ಒಂದು ಮಾರ್ಗದರ್ಶಕವಾದಂಥ ಪಕ್ಷ ಅದು. ಆದುದರಿಂದ ಈ ದಿನ ಯಾವುದಃ ಒಂದು ವಿರೋಧಪಕ್ಷವೆಂದು ಇರುತ್ತದೆಯೋ ಅದು ಸರ್ಕಾರದ ಕಾರ್ಯಕಲಾಪಗಳನ್ನು ಒಂದು ಅನ್ಯಥಾ ರೀತಿಯಲ್ಲಿ ಟೀಕೆ ಮಾಡುವುದಕ್ಕೆ ಹೋಗದೆ ಒಂದು ರಚನಾತ್ಮಕ ರೀತಿಯಲ್ಲಿ ಟೀಕೆ ಮಾಡಿ ಸರ್ಕಾರ ಒಂದು ಒಳ್ಳೆಯ ಹಾದಿಯಲ್ಲಿ ಹೋಗುವಂತೆ ಮಾಡಬೇಕಾದ ಒಂದು ಮುಖ್ಯ ಕರ್ತವ್ಯ ಆ ವಿರೋಧಪಕ್ಷದ ಹೊಣಗಾರಿಕೆಗೆ ಸೇರಿದ್ದಾಗಿದೆ. ಅಂಥ ಒಂದು ಸದವಕಾಶವನ್ನು ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಉಪಯೋಗಿಸಿಕೊಳ್ಳದೆ ಅದರಿಂದ ದೇಶಕ್ಕೊಂದು ಹೆಚ್ಚಿನ ಅಪಘಾತಕವೇನಾದರೂ ಆದರೆ ಅದಕ್ಕೆಲ್ಲ ಅವರೇ ಜವಾಬ್ದಾರರಾಗಬೇಕಾಗಿ ಬರಬಹುದೆಂದು ನನಗೆ ಅನಿಸುತ್ತಿದೆ. ಆದರೆ ಆ ವಿರೋಧ ಪಕ್ಷದ ಮಾನ್ಯ ಸದಸ್ಯರು ಈಗ ಸಭೆಯಲಿಲ್ಲ. ಆದಕಾರಣ ನಾನೀಗ ಅವರ ವಿಚಾರವಾಗಿ ಪ್ರಸ್ತಾಪ ಮಾಡುವುದು ಅಷ್ಟು ಸಾಧುವಾದುದಲ್ಲ. ಆದರೆ ಈ ಹಿಂದೆ ನಮ್ಮ ಮಾನ್ಯ ಸಭಾಪತಿಗಳವರು ವಿರೋಧ ಪಕ್ಷದವರು ತಂದಿದ್ದಂಥ ಒಂದು ನಿಲುವಳಿ ಸೂಚನೆಯ ಬಗ್ಗೆ ಏನೊಂದು ತಮ್ಮ ರೂಲಿಂಗನ್ನು ಕೊಟ್ಟರೋ ಅದರಿಂದ ಆ ವಿರೋಧ ಪಕ್ಷದವರಿಗೆ ಅವರ ಮನಸ್ಸಿನಲ್ಲಿ ಅವರೇನು ದೇಶಕ್ಕೊಂದು ಒಳ್ಳೆಯದನ್ನುಂಟು ಮಾಡಬೇಕೆಂಬ ಸದುದ್ದೇಶದಿಂದ ಆ ಒಂದು ನಿಲುವಳಿ ಸೂಚನೆಯನ್ನು ತಂದಿದ್ದರೋ ಅದನ್ನು ಸಭೆಯಲ್ಲಿ ಚರ್ಚೆಮಾಡಿ ಅದಕ್ಕೊಂದು ಒಳ್ಳೆಯ ಚಿತ್ರಕೊಟ್ಟು ತನ್ಮೂಲಕ ಅವರು ಪ್ರಜೆಗಳಿಂದ ಒಂದು ಒಳ್ಳೆಯ ಅಭಿಪ್ರಾಯ ಪಡೆಯಬೇಕೆಂದಿದ್ದು ಆಗ ಸಫಲವಾಗದೆ ಇದ್ದರೂ ಅವರಿಗೆ ಬಡ್ಜೆಟ್ ಮೇಲೆ ಚರ್ಚೆನಡೆಸುವಾಗ ಇದ್ದ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಆ ವಿಚಾರಗಳನ್ನೇ ಮತ್ತೆ ಚರ್ಚೆ ಮಾಡಲು ಅವಕಾಶವಿತ್ತು. ಆದರೆ ಅವರೇಕೆ ಆ ರೀತಿ ಮಾಡಲಿಲ್ಲವೋ ನನಗೆ ಅದು ಗೊತ್ತಾಗುತ್ತಿಲ್ಲ. ಅವರು ಆ ವಿಚಾರದಲ್ಲಿ ಇತ್ತೀಚೆಗೆ ಅನುಸರಿಸಿದ ರೀತಿ ನೀತಿಯನ್ನು ನೋಡಿದರೆ ಅವರೇನು ತಮ್ಮ ನಿಲುವಳಿ ಸೂಚನೆಯಲ್ಲಿ ಯಾವ ಒಂದು ಅಂಶ ಅತ್ಯಂತ ಖಚಿತವಾದುದೆಂದು ಭಾವಿಸಿ ಅದಕ್ಕೊಂದು ರೂಪು ಕೊಡಬೇಕೆಂದು ಉದ್ದೇಶಿಸಿದ್ದಾರೋ ಆ ವಿಚಾರದಲ್ಲೇ ಅವರಿಗೆ ಅಂಥ ಒಂದು ನಂಬಿಕೆ ಇಲ್ಲದುದರಿಂದಲೇ ಪ್ರಾಯಶಃ ಅವರು ಅಧ್ಯಕ್ಷರು ಕೊಡುತ್ತಿದ್ದ ಈ ಒಂದು ಅವಕಾಶವನ್ನು ಅವರು ಉಪಯೋಗ ಮಾಡಿ

ಕೊಳ್ಳಲು ಇಷ್ಟಪಡಲಿಲ್ಲವೆಂದೂ ಮತ್ತು ಅವರು ಅಂಥ ಒಂದು ನಿರ್ದಿಷ್ಟರೀತಿಯಲ್ಲಿ ಕ್ರಮ ಕೈಗೊಳ್ಳಲಿಲ್ಲವೆಂದೂ ನನಗನಿಸುತ್ತಿದೆ. ಈಗ ನಮ್ಮ ಸಭೆಯ ಮುಂದಿರತಕ್ಕ ಬಡ್ಜೆಟ್ಟಿನ ಮೇಲೆ ಅನೇಕ ವಿಷಯಗಳು ಚರ್ಚೆಯಾಗಬೇಕಾದ್ದಿದೆ. ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಸರ್ಕಾರ ನಿರ್ವಹಿಸಿಕೊಂಡು ಬರತಕ್ಕ ಕೆಲಸ ಕಾರ್ಯಗಳು ಅನೇಕವಾಗಿವೆ. ಅವುಗಳನ್ನು ಸರ್ಕಾರ ಆದಷ್ಟು ನಿರ್ವಹಿಸಿಕೊಂಡು ಬರುತ್ತಿದೆ. ಆದರೆ ಇತ್ತೀಚೆಗೆ ಹೊಸ ರಾಜ್ಯವಾದಮೇಲೆ 5 ಹೊಸ ಭಾಗಗಳು ಒಂದುಕಡೆ ಒಟ್ಟಾಗಿ ಸೇರಿರುವಾಗ ಕೆಲಸಗಳು ಅಷ್ಟು ಸರಾಗವಾಗಿ ನಡೆಯಬೇಕೆಂದರೆ ಅದು ಸಾಧ್ಯವಿಲ್ಲ. ಅನೇಕ ಕಷ್ಟಗಳಿರುತ್ತವೆ. ಆದ್ದರಿಂದ ಜನರು ದೇಶಾಭ್ಯುದಯ ಕಾರ್ಯಗಳ ಬಗ್ಗೆ ಏನೊಂದು ನಿರೀಕ್ಷಣೆ ಮಾಡಿಕೊಂಡಿದ್ದರೋ ಅಷ್ಟು ಹೆಚ್ಚಿನ ವೇಗದಲ್ಲಿ ಆ ಕೆಲಸಗಳನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗಲಿಲ್ಲವೆಂದು ನಾವೀಗ ಅಂದುಕೊಳ್ಳಬೇಕಾಗಿದೆ. ಆದರೆ ಇಂದು ನಮ್ಮ ಸರ್ಕಾರೀ ಆಡಳಿತ ಯಂತ್ರವು ಜನತೆ ಏನೊಂದು ಹೆಚ್ಚಿನ ನಿರೀಕ್ಷಣೆಯನ್ನು ಮತ್ತು ಒಂದು ಹೆಚ್ಚಿನ ವೇಗದಲ್ಲಿ ಜನಾನುಕೂಲ ಕಾರ್ಯಗಳಾಗಬೇಕೆಂದು ಆಶಿಸುತ್ತಿದೆಯೋ ಆ ಮಟ್ಟದಲ್ಲಿ ಅದು ಕೆಲಸ ಕಾರ್ಯಗಳನ್ನು ಮಾಡುತ್ತಿಲ್ಲ ಎನ್ನುವುದು ನಿರ್ವಿವಾದವಾದ ವಿಷಯ. ಆದುದರಿಂದ ಈ ಸರ್ಕಾರಿ ಆಡಳಿತ ಯಂತ್ರವನ್ನು ಸರಿಪಡಿಸಿ, ತನ್ಮೂಲಕ ಸುಖೀ ರಾಜ್ಯಸ್ಥಾಪನೆಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಬೇಗ ಕಾರ್ಯರೂಪಕ್ಕೆ ತಂದು ಅದರಿಂದ ದೇಶಕ್ಕೊಂದು ಫಲ ದೊರೆಯುವಂಥ ರೀತಿಯಲ್ಲಿ ಈ ಆಡಳಿತ ಯಂತ್ರವನ್ನು ಆದಷ್ಟು ಬೇಗ ಸರ್ಕಾರ ಸರಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಚಾರ ತಿಳಿಸಬೇಕಾಗಿದೆ. ಗೆಜೆಟೆಡ್ ಹುದ್ದೆಯಲ್ಲಿ ಮತ್ತು ನಾನ್ ಗೆಜೆಟೆಡ್ ಹುದ್ದೆಯಲ್ಲಿರತಕ್ಕ ನೌಕರರಲ್ಲಿ ಅವರ ಸೀನಿಯಾರಿಟಿ ಬಗ್ಗೆ ಏನೋ ಒಂದು ತರಹೆಯ ಜಿಗುಪ್ಸೆ ಬಂದಿರುವಂತೆ ಎಲ್ಲೆಲ್ಲಿಯೂ ಕಾಣಬರುತ್ತಿದೆ. ಎಲ್ಲಿ ನೋಡಲಿ ಈ ನೌಕರ ವರ್ಗದಲ್ಲಿ ಅನೇಕರು ನಮಗೆ ದೊರೆಯಬೇಕಾಗಿದ್ದ ಪ್ರಮೋಷನ್ ಕೊಡಲಿಲ್ಲ ನಮಗೆ ದೊರೆಯಬೇಕಾಗಿದ್ದ ಸೀನಿಯಾಟಿರಿ ತಪ್ಪಿಹೋಯಿತು ಎಂದು ಹೇಳುತ್ತಿದ್ದಾರೆ. ಆದುದರಿಂದ ಸರ್ಕಾರದವರು ಆದಷ್ಟು ಬೇಗ ಈ ಸಮಸ್ಯೆಯ ಬಗ್ಗೆ ಒಂದು ಕೂಲಂಕಷವಾದ ಪರಿಶೀಲನೆ ನಡಿಸಿ ಒಂದು ನಿರ್ದಿಷ್ಟ ತೀರ್ಮಾನವನ್ನು ತೆಗೆದುಕೊಳ್ಳದ ವಿನಾ ಅವರಲ್ಲಿರತಕ್ಕ ಆ ಜಿಗುಪ್ಸೆ ಹೋಗುವಂತಿಲ್ಲ ಆದರೆ ಆ ಜಿಗುಪ್ಸೆ ಆದಷ್ಟು ಬೇಗ ಹೋಗಲೇಬೇಕು. ಅವರ ಜಿಗುಪ್ಸೆ ಹೋಗದಿದ್ದರೆ ಇಲ್ಲಿ ನಮ್ಮ ಕೆಲಸಗಳು ಸರಿಯಾಗಿ ನಡೆಯುವುದಿಲ್ಲ. ಆದರೆ ಈ ದಿವಸ ನಮ್ಮ ದೇಶದಲ್ಲಿರತಕ್ಕ ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳೇನಿವೆಯೋ ಅವು ನಮ್ಮ ದೇಶಕ್ಕೆ ಖಂಡಿತ ತರವಲ್ಲ. ಈ ಹುದ್ದೆಗಳನ್ನು ಕೇಂದ್ರ ಸರ್ಕಾರದವರೇ ಮಾಡಬಹುದು. ಅವರೇ ಮಾಡಿದ್ದಾಗ್ಯೂ ನಮಗೀಹುದ್ದೆಗಳು ಅನಾವಶ್ಯಕವೆಂಬುದಾಗಿ ನಮ್ಮ ಸರ್ಕಾರದವರು ಅವರಿಗೆ ಘಂಟಾಘೋಷವಾಗಿ ತಿಳಿಸಲೇಬೇಕು. ನಮ್ಮ ಹಿಂದಿನ ಮೈಸೂರಿನಲ್ಲಿದ್ದ M.C.S. ದರ್ಜೆ ಈಗಿನ I.A.S. ದರ್ಜೆಗಿಂತ ಬಹಳ ಖ್ಯಾತಿ ಹೊಂದಿತ್ತು. ದೇಶವಾತ್ಸಲ್ಯದಿಂದ ಕೆಲಸ ಮಾಡಿಕೊಂಡು ದೇಶದಲ್ಲಿ ಸಂಪದಭಿವೃದ್ಧಿ ಕಾರ್ಯಗಳನ್ನು ಸಲಲಿತವಾಗಿ ಮತ್ತು ಸಮರ್ಪಕವಾಗಿ ನಡೆಸಿಕೊಂಡು ಹೋಗಬೇಕಾಗಿದ್ದರೆ ಇದಕ್ಕೆಲ್ಲ ಹಿಂದಿನ ಮೈಸೂರು ಸಿವಿಲ್ ಸರ್ವಿಸ್ ಅಧಿಕಾರಿಗಳು ಹೆಸರು ಪಡೆದಿದ್ದಾರೆ. ಈಗಿರತಕ್ಕ ನವೀನ I.A.S. ಮತ್ತು I.P.S. ದರ್ಜೆಗಳು ಹಿಂದಿದ್ದ M.C.S. ದರ್ಜೆಗಿಂತ 10 ಪಟ್ಟು ಕಡಮೆ ದರ್ಜೆಯವುಗಳಾಗಿರುತ್ತವೆ. ಹಾಗಿದ್ದರೂ ಇವರಿಗೆ ಪ್ರತಿ ತಿಂಗಳೂ 200-250 ರೂಪಾಯಿಗಳ ಅಲೋಯರ್ನುಗಳನ್ನು ಹೆಚ್ಚಾಗಿ ಕೊಡಬೇಕಾಗಿದೆ. ಹೀಗೆ ಅಧಿಕಾರಿಗಳ ವರ್ಗಕ್ಕೆ ಒಂದು ಕಡೆ ಅತಿ ಹೆಚ್ಚಿನ 1,200-1,800 ರೂಪಾಯಿಗಳ ಸಂಬಳ ಸಾರಿಗೆಗಳನ್ನು ಕೊಡುತ್ತ ಇನ್ನೊಂದು ಕಡೆ ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ಜಾರಿಗೆ ತರುತ್ತೇವೆಂದು ಬಾಯಿನಲ್ಲಿ ಹೇಳುತ್ತ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರಿಗೆ ಒಂದು ಫ್ಯಾಮಿಲಿ ಹಿಡುವಳಿ ಜಮೀನಿದ್ದರೆ ಸಾಕೆಂದು ಹೇಳುತ್ತ 2,000 ರೂಪಾಯಿಗಳ ನೌಕರಿಗಳನ್ನು ಹೆಚ್ಚಿಸಲು ಹೋಗುವುದು ಸರಿಯಾದ್ದಲ್ಲ. ಏನೋ ಕೇಂದ್ರ ಸರ್ಕಾರದವರು ಮಾಡಿದ್ದಾರೆಂದರೆ ಅದೇನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕೆಂದಿಲ್ಲ. ನಾವು ಈ ಹುದ್ದೆಗಳು ನಮಗೆ ಬೇಕಾಗಿಲ್ಲವೆಂದು ಸೂಚಿಸಿದರಾಯಿತು. ಇಂಡಿಯಾ ಸರ್ಕಾರದ ಪ್ಲಾನಿಂಗ್ ಕಮಿಷನಿನವರು ಭೂಸುಧಾರಣೆಯ ಸಂಬಂಧದಲ್ಲಿ ವ್ಯವಸಾಯಗಾರರಿಗೆ ಎಂದರೆ ಜಮೀನ್ದಾರರಿಗೆ 1,200 ರೂಪಾಯಿಗಳ ವಾರ್ಷಿಕ ವರಮಾನ ಬರತಕ್ಕಂಥ ಒಂದು ಫ್ಯಾಮಿಲಿ ಹಿಡುವಳಿ ಆಸ್ತಿಗಿಂತ ಹೆಚ್ಚಾಗಿರಕೂಡದೆಂದು ಹೇಳಿ ಇನ್ನೊಂದು ವರ್ಗದ ಜನರಿಗೆ ತಿಂಗಳಿಗೆ 2,000-3,000 ರೂಪಾಯಿಗಳ ಹುದ್ದೆಗಳನ್ನು ನಿರ್ಮಿಸುತ್ತ ಹೋಗುವುದು ದೇಶಕ್ಕೆ ಕೀರ್ತಿ ತರುವಂಥ ಕೆಲಸವಲ್ಲ. ಇದರಿಂದ ಮುಂದೆ ದೇಶಕ್ಕೆ ಬಹಳ ಅನ್ಯಾಯ ಮತ್ತು ಅನಾನುಕೂಲಗಳಾಗುತ್ತವೆ. ಆದುದರಿಂದ ಸಮಾಜವನ್ನೇ ಏರುಪೇರು ಮಾಡತಕ್ಕ ಕಾರ್ಯಗಳಿವು. ಸರ್ಕಾರದವರು ಕೂಡಲೆ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇದೇ ರೀತಿ ನಮ್ಮ ರಾಜ್ಯಸರ್ಕಾರದ ಆಡಳಿತ ಯಂತ್ರವನ್ನು ಕೂಡ ಸರಿಪಡಿಸಲೇಬೇಕಾಗಿದೆ. ಹಿಂದಿನ ಕಾಲದಲ್ಲಿ ಒಬ್ಬ ಆಫೀಸರು 20-25 ವರ್ಷ ಸರ್ವಿಸ್ ಆಗದ ವಿನಾ ಆತನಿಗೆ ಡೆಪ್ಯುಟೀ ಕಮೀಷನರ ಹುದ್ದೆ ದೊರೆಯುವುದು ಬಹಳ ಕಷ್ಟವಾಗಿತ್ತು. ಆದರೆ ಈ ದಿವಸ ಕೆಲವು ವರ್ಷಗಳ ಸರ್ವಿಸ್ ಆಗುತ್ತಿದ್ದಹಾಗೇ ಅವರು ಡೆಪ್ಯುಟೀ ಕಮೀಷನರಾಗುತ್ತಾರೆ. ಹಳಬರು ನಮಗೆ ಸೀನಿಯರ್ ಡೆಪ್ಯುಟೀ ಕಮಿಷನರ್ ಛಾರ್ಜ್ ಇನ್ನೂ ಬರಲಿಲ್ಲವೆಂದು ಕೊರಗಾಡುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಈ ಹೊತ್ತು ಸಹ ಶೇಕಡ 95ರಷ್ಟು ಜನರು ದಿನ ಒಂದಕ್ಕೆ ಒಂದು ರೂಪಾಯಿನ ದಿನ ಕೂಲಿ ಮೇಲೆ ಜೀವನ ನಡೆಸುತ್ತಿದ್ದಾರೆ. ಹಾಗೆ ಒಂದು ಕಡೆ ಜನಜೀವನದ ದುರ್ಭರವನ್ನು ಕಾಣುತ್ತಿರುವಾಗ ಇತ್ತ ಕಡೆ ನೌಕರಿ ವರ್ಗದಲ್ಲಿರತಕ್ಕ ಜನ ತಮಗೊಂದು ಜೀವನ ಸುಗಮವಾಗಿ ನಡೆಯುವಂಥ ಅವಕಾಶವಿದ್ದರೂ ಯಾವಾಗ್ಯೂ ತಮ್ಮ ಮೇಲ್ಮೆಯ ಕಡೆಗೇ ಅವರು ದೃಷ್ಟಿಯಿಟ್ಟುಕೊಂಡು ದೇಶದ ಬೆನ್ನು ಮೂಳೆಯೆಂದು ಈ ದಿವಸ ನಾವುಗಳೆಲ್ಲ ಕರೆಯುತ್ತಿರುವ ಜನ ಎನಿದ್ದಾರೋ ಅವರು ಸುಖವಾಗಿದ್ದು ದೇಶದ ಉತ್ಪತ್ತಿಯನ್ನು ಹೆಚ್ಚು ಮಾಡುವಂಥ ರೀತಿಯಲ್ಲಿ ನಮ್ಮ ಆಡಳಿತ ಯಂತ್ರ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗತಕ್ಕ ರೀತಿಯಲ್ಲಿ ಒಂದು ಏರ್ಪಾಟನ್ನು ಮಾಡಬೇಕಾಗಿದೆ. ಇದರ ಜೊತೆಗೆ ಈ ದಿವಸ ಆ ಅಧಿಕಾರ ವರ್ಗದವರಾದರೂ ತಮಗೆ ಏನೇ ಒಂದು ಜಿಗುಪ್ಸೆಯಿರಲಿ ಅವರಿಗೆ ಸಲ್ಲಬೇಕಾಗಿರತಕ್ಕ ಸಂಬಳ ಸಾರಿಗೆಗಳು

(ಶ್ರೀ ಎ. ಮುನಿರಾಜು.)

ಯಾವ ಮಟ್ಟದಲ್ಲೇ ಇರಲಿ ಅವುಗಳಲ್ಲಿರತಕ್ಕ ಏರು ಪೇರುಗಳನ್ನು ಖಂಡಿತ ಸರಿಪಡಿಸಿ ಅವರವರಿಗೆ ನ್ಯಾಯವಾಗಿ ಸಲ್ಲಬೇಕಾದ ಸಂಬಳಗಳು ಖಂಡಿತ ದೊರೆಯುತ್ತವೆ, ನಮ್ಮವರೇ ಆಡಳಿತ ನಡೆಸುತ್ತಿದ್ದಾರೆ, ಒಂದಲ್ಲ ಒಂದುರೀತಿಯಲ್ಲಿ ಅದನ್ನು ಸರಿಪಡಿಸುತ್ತಾರೆಂಬ ಭರವಸೆಯನ್ನಿಟ್ಟುಕೊಂಡು ಒಂದೇ ದೃಢ ಮನಸ್ಸಿನಿಂದ ನಮ್ಮ ನೌಕರ ವರ್ಗದವರು ದೇಶಾಡಳಿತ ಕೆಲಸ ಕಾರ್ಯಗಳನ್ನು ಒಂದು ದೇಶಪ್ರೇಮ ಭಾವನೆಯಿಂದ ಮಾಡಿಕೊಂಡು ಹೋಗಬೇಕೆಂದು ನಾನು ನಮ್ಮ ಸರ್ಕಾರದವರ ಮೂಲಕ ಅವರನ್ನು ಸಹ ಪ್ರಾರ್ಥಿಸಿ ಕೊಳ್ಳುತ್ತೇನೆ.

ಈ ವಿಚಾರವಾಗಿ ಈಗ ನಾನು ಹೆಚ್ಚಿಗೆ ಹೇಳುವುದಿಲ್ಲ. ನ್ಯಾಯಾಂಗ ಆಡಳಿತೆಯ ಬಗ್ಗೆ ಹೇಳುವುದಾದರೆ ಫೆಬ್ರುವರಿ ತಿಂಗಳಿನಲ್ಲಿ ಕೂಡ ಮುನಿಸಿಫ್‌ರ ನೇಮಕವಾಗದೇ ಇದ್ದರೆ ಕೋರ್ಟು ಮುಚ್ಚಿ ಬಿಡುವ ಪ್ರಸಂಗ ಬರಬಹುದು. ಇಂಥ ಪ್ರಸಂಗ ನಮ್ಮ ದೇಶದ ಚರಿತ್ರೆಯಲ್ಲಿ ಇರಲಿಲ್ಲ. ಒಂದು ವರ್ಷದಿಂದ ನೇಮಕ ಮಾಡದೆ ಇದ್ದರೆ ನ್ಯಾಯಾಂಗ ಆಡಳಿತೆಯು ದಕ್ಷತೆಯಿಂದ ಹೇಗೆ ನಡೆಯಬಲ್ಲದು ? ಖಂಡಿತವಾಗಿ ಆಡಳಿತ ಯಂತ್ರ ಸುಸೂತ್ರವಾಗಿ ನಡೆಯುತ್ತಿಲ್ಲ. ಇದು ದೇಶಕ್ಕೆ ಕೀರ್ತಿ ತರತಕ್ಕ ವಿಷಯವಲ್ಲ. ಇಂಥಾದ್ದನ್ನು ಲಘುವಾಗಿ ಯೋಚನೆ ಮಾಡತಕ್ಕದ್ದಲ್ಲ. ಹಾಗು ಯಾರೂ ಒಪ್ಪತಕ್ಕಂಥಾದ್ದಲ್ಲ. ಸಂಬಂಧಪಟ್ಟ ಮಂತ್ರಿಗಳು ಮತ್ತು ಇಲಾಖೆಯವರೂ ಕೂಲಂಕಷವಾಗಿ ವಿಚಾರ ಮಾಡಬೇಕು, ಹಾಗು ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯದ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಸೂಚನೆಗಳನ್ನು ಕೊಟ್ಟಿದ್ದಾರೆ ಏನು ಮಾಡಬೇಕೆಂಬುದನ್ನು ತೀರ್ಮಾನ ಮಾಡಬೇಕು. ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡುವಂತೆ ಆಗಬೇಕು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

SRI J. H. SHAMSUDDIN (Honawar].- On a point of information. Can the Hon'ble Member discuss the whole Budget or his remarks should be confined to 7 Land Revenue only ?

ಶ್ರೀ ಎ. ಮುನಿರಾಜು.—ಸಾಮಾನ್ಯ ಚರ್ಚೆಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಕೋ-ಅಪರೇಟಿವ್ ಸೊಸೈಟಿ ವಿಷಯ ಬಹಳ ಮುಖ್ಯವಾದುದು. ದೇಶಕ್ಕೆ ಒಳ್ಳೆಯದಾಗಲೆಂದು ಅನೇಕ ಯೋಜನೆಗಳಿಗಾಗಿ ಸರಕಾರ ಹಣ ಕೊಡುತ್ತಿದೆ. ಈ ಕೆಲಸ ಕಾರ್ಯಗಳು ಸರಿಯಾಗಿ ನಡೆಯಬೇಕು. ಒಂದೊಂದುಸಾರಿ ಸರಿಯಾದ ಸಾಮಗ್ರಿಗಳನ್ನು ಒದಗಿಸಲಾಗುವದಿಲ್ಲವೇ ಎಂಬ ಅಭಾಸವಾಗುತ್ತದೆ ಈ ಇಲಾಖೆಗೆ ಹೆಚ್ಚಿನ ಗಮನ ಕೊಡಬೇಕಾದುದು ಅಗತ್ಯ. ಅದೇರೀತಿಯಾಗಿ ಡೆವಲಪ್‌ಮೆಂಟ್ ಇಲಾಖೆ, ಜನರಲ್ ಅಡ್‌ಮಿನಿಸ್ಟ್ರೇಷನ್, ಕುಡಿಯುವ ನೀರಿನ ಯೋಜನೆ ಮುಂತಾದುವುಗಳಿಗೆ ಸಹ ಹೆಚ್ಚಿನ ಗಮನ ಕೊಡತಕ್ಕದ್ದು ಅವಶ್ಯಕ. 1957-58ನೇ ಸಾಲಿನಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ ಮಾಡಲಾಗುತ್ತದೆಂದು ಹೇಳುತ್ತಲೇ ಇದ್ದಾರೆ. ಆದರೆ ಇಂದು ಮಾರ್ಚಿ ತಿಂಗಳ 19ನೇ ತಾರೀಖು ಇದ್ದರೂ ಸಹ ಯೋಜನೆ ಕಾರ್ಯಗತವಾಗಿಲ್ಲ. ಈ ರೀತಿ ವಿಳಂಬ ಮಾಡದೆ ಕೆಲಸ ಕಾರ್ಯಗಳು ಸರಿಯಾಗಿ ನಡೆಸಿಕೊಂಡು ಹೋಗುವಹಾಗೆ ಮಾಡಬೇಕೆಂದು ಮತ್ತೊಮ್ಮೆ ಸರಕಾರಕ್ಕೆ ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು).—ಸ್ವಾಮಿ, ಈ ಆಯವ್ಯಯ ಪಟ್ಟಿಯ ಮೇಲೆ ಮಾತನಾಡಲು ಅವಕಾಶ ದೊರೆತಿರುವ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ನಾನು ಹೇಳಲು ಬಯಸುತ್ತೇನೆ. ನನಗಿಂತ ಮೊದಲು ಮಾತನಾಡಿದ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಈಗಾಗಲೇ ಹೇಳಿದ್ದಾರೆ. ಮೊದಲನೆಯದಾಗಿ ಆಡಳಿತ ಯಂತ್ರ. ಅಷ್ಟು ಸುಸೂತ್ರವಾಗಿ ನಡೆಯುತ್ತಿಲ್ಲವಲ್ಲಾ ಎಂದು ಹೇಳತಕ್ಕ ಪರಿಸ್ಥಿತಿ ಬಂದಿದೆಯಲ್ಲಾ ಎಂದು ಅನಿಸುತ್ತದೆ. ಇದಕ್ಕೆ ಒಂದೆರಡು ಕಾರಣ ಹೇಳುತ್ತೇನೆ. ಸಾಮಾನ್ಯವಾಗಿ ಸದಸ್ಯರು ಅಭಿಪ್ರಾಯಪಟ್ಟಹಾಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ, ಎಸ್ಟಿಮೇಟ್ಸ್ ಕಮಿಟಿ ವರದಿಗಳನ್ನು ಈ ಸಭೆಯಮುಂದೆ ಇಟ್ಟಿದ್ದರೆ, ಬಡ್ಜೆಟ್ ಡಿಮ್ಯಾಂಡ್ಸ್ ಮೇಲೆ ಅಭಿಪ್ರಾಯ ಸೂಚಿಸುವುದಕ್ಕೆ ಅನುಕೂಲವಾಗುತ್ತಿತ್ತು. ಆ ರೀತಿ ನಮಗೆ ಅವಕಾಶವಾಗಲಿಲ್ಲ. ಇದರಿಂದ ಕರ್ತವ್ಯ ಲೋಪವಾಗಿದೆ ಎಂದು ಹೇಳಬಹುದು.. ಯಾಕೆಂದರೆ ಇದೊಂದು ಬಹಳ ಮುಖ್ಯವಾದ ವಿಷಯ. ಈ ವರದಿಗಳು ಸಭೆಯ ಮುಂದೆ ಇರದೇ ಇರುವದರಿಂದ ಸಾಮಾನ್ಯವಾಗಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೋ ಅಥವಾ ಇಲ್ಲವೋ ಎಂಬ ಭಾವನೆ ಮೂಡಲು ಅವಕಾಶವಾಗುತ್ತದೆ. ಇನ್ನೊಂದು ಉದಾಹರಣೆ ಹೇಳುವದಾದರೆ ಹೋದ ಅಸೆಂಬ್ಲಿ ಅಧಿವೇಶನ ಕಾಲದಲ್ಲಿ ನಾನು ಒಂದು ಶಾರ್ಟ ನೋಟೀಸ ಪ್ರಶ್ನೆ ಕೊಟ್ಟಿದ್ದೇನೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೂ ಈ ವಿಚಾರ ನಾನು ತಿಳಿಸಿದ್ದೇನೆ. ಈಗ ಒಂಬತ್ತು ತಿಂಗಳಾಗಿ ಹೋಯಿತು. ಅದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿಲ್ಲ, ಶಾರ್ಟ್ ನೋಟೀಸ್ ಪ್ರಶ್ನೆ ಎಷ್ಟು ಮಹತ್ವದ್ದೆಂಬುದನ್ನು ಹೇಳುವುದು ಅವಶ್ಯವಿಲ್ಲ. ಒಬ್ಬ ಮ್ಯಾಜಿಸ್ಟ್ರೇಟ್ ಪೋಲಿಸ್ ಚಾರ್ಜಶೀಟ್ ಬಗ್ಗೆ ಏನು ಅಭಿಪ್ರಾಯಪಟ್ಟರು ಮತ್ತು ಅದರ ಪರಿಣಾಮವಾಗಿ ಎಷ್ಟು ಮೊಕದ್ದಮೆಗಳನ್ನು ವಜಾಮಾಡಿದರು ಎಂದು ಕೂಡಲೇ ಇಂತಹ ತುರ್ತು ವಿಷಯಗಳ ಬಗ್ಗೆ ಉತ್ತರ ಕೊಡುವ ಅವಕಾಶ ಆಗಬೇಕು. ಇದರ ಸಲುವಾಗಿ ಎರಡು ಮೂರುಸಲ ಸಂಬಂಧಪಟ್ಟ ಮಂತ್ರಿಗಳಿಗೂ ಹೇಳಿದೆ. ಅಧ್ಯಕ್ಷರಿಗೂ ಕೂಡ ಹೇಳಿದ್ದೇನೆ. ಆದರೆ ಇದರ ಬಗ್ಗೆ ಯಾವ ಕೆಲಸ ನಡೆದಿಲ್ಲ. ಸರಕಾರದ ಆಡಳಿತ ಯಂತ್ರ ಸರಿಯಾಗಿ ನಡೆಯುವದಾಗಿದ್ದರೆ ಇದಕ್ಕೆ ಉತ್ತರ ಏಕೆ ಬರಲಿಲ್ಲ ?

The information is not with us. It is their responsibility to get the information; if they do not get the information, it only means the information has not been supplied. That means the administration is not co-operating with them or refuses to work.

ಇಂಥ ಅಭಿಪ್ರಾಯ ಬರುವುದಕ್ಕೆ ಅವಕಾಶ ಉಂಟಾಗುತ್ತದೆಂದು ಹೇಳಬೇಕಾಗಿದೆ.

ಶ್ರೀ ಸಿ. ಎಂ. ಪೂಣಚ್ಚ (ಕೈಗಾರಿಕೆ ಮತ್ತು ಒಳಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ಈಗತಾನೆ ಒಂದು ತ್ವರಿತ ಪ್ರಶ್ನೆಯ ವಿಷಯ ಪ್ರಸ್ತಾಪ ಮಾಡಿ ಹೇಳಿದರು. ಆ ಪ್ರಶ್ನೆಗೆ ಬೇಕಾಗಿದ್ದ ವಿಷಯಗಳನ್ನೆಲ್ಲಾ ಸಂಗ್ರಹಿಸಿ ಅದಕ್ಕಿರುವ ಉತ್ತರವನ್ನು ಸಹ ಸಿದ್ಧಪಡಿಸಿ ಅಸೆಂಬ್ಲಿ ಸೆಕ್ರೆಟೆರಿಯಟ್‌ಗೆ ಕಳಿಸಿ

ಕೊಟ್ಟಿದ್ದೇವೆ. ಬೇರೆ ಜಿಲ್ಲೆಯ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ವಿಷಯ ಸಂಗ್ರಹಿಸಬೇಕಾದ್ದರಿಂದ ಸ್ವಲ್ಪ ಕಾಲ ವಿಳಂಬವಾಯಿತು. ಪರಿಪೂರ್ಣವಾಗಿ ವಿಷಯ ಸಂಗ್ರಹಿಸಲು ಸ್ವಲ್ಪ ಸಾವಕಾಶವ ಗಿದೆ ಈಗಾಗಲೇ ಪ್ರಶ್ನೆ ಮತ್ತು ಉತ್ತರ ಅಸೆಂಬ್ಲಿ ಸೆಕ್ರೆಟೇರಿಯಟ್ಟಿಗೆ ಕಳಿಸಲಾಗಿದೆ. ಆದುದರಿಂದ ಇನ್ನುಮೇಲೆ ಶೀಘ್ರವಾಗಿ ಸಭೆಯಮುಂದೆ ಅದು ಬರುತ್ತದೆಂದು ಆಶ್ವಾಸನ ಕೊಡುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಒಂಭತ್ತು ತಿಂಗಳಾದಮೇಲೆ ಕೂಡ ಇನ್ನು ಶೀಘ್ರವಾಗಿ ಆ ಪ್ರಶ್ನೆ ಸಭೆಯಮುಂದೆ ಬರುತ್ತದೆಂದು ಹೇಳಿದ್ದನ್ನು ಕೇಳಿ ಸಂತೋಷಪಟ್ಟುಕೊಳ್ಳುತ್ತೇನೆ.

11-30 A.M.

[MR. DEPUTY SPEAKER in the Chair]

ಏಕೆಂದರೆ, ಇವೊತ್ತೇನೋ ನಾವು ಸದಸ್ಯರುಗಳು ಇಲ್ಲಿ ಸಭೆ ನಡೆಯುತ್ತಿದ್ದಾಗ ಕೆಲವು ವಿಷಯಗಳನ್ನು ಸಭೆಯ ಮುಂದೆ ತರಬಹುದು. ಆದರೆ, ಈ ವಿಳಂಬ ನೀತಿಯಿಂದ ಜನಸಾಮಾನ್ಯರಲ್ಲಿ ಯಾವ ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆಂಬುದನ್ನು ಯೋಚನೆಮಾಡಬೇಕು. ಆಡಳಿತ ಯಂತ್ರ ಎಷ್ಟು ಸಡಿಲವಾಗಿದೆಯೆಂಬುದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಈಹೊತ್ತಿನ ಅಡ್ಜೋರ್ನ್‌ಮೆಂಟ್ ಸೂಚನೆಯ ವಿಚಾರ. ಸಭೆಯಲ್ಲಿ ಬಹಿರಂಗವಾಗಿ ತಿಳಿಸಿ ಎಲ್ಲಾ ವಿಷಯಗಳನ್ನು ಸರ್ಕಾರದವರು ಒಂದು ಮಾರ್ಗದರ್ಶನ ಮಾಡಬೇಕಾಗಿತ್ತು. ನಮಗೇನೋ ಮಂತ್ರಿಗಳು ಹೇಳಿರಬಹುದು. ಆದರೆ ಸಭೆಯ ಗಮನಕ್ಕೂ ತರಬೇಕಾದ್ದು ಅವಶ್ಯಕವಾಗಿತ್ತು. ಈ ಮಧ್ಯೆ ಸದಸ್ಯರೊಬ್ಬರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆಂದೂ ತಿಳಿದಿದ್ದೇನೆ. ಒಟ್ಟಿನಲ್ಲಿ ಇದರಿಂದ ಈಗ್ಗೆ ಎರಡು ಮೂರು ದಿನಗಳಿಂದ ಈ ಸಭೆಯಲ್ಲಿ ಯಾವ ಉಪಯುಕ್ತ ಕೆಲಸವೂ ಆಗದೆ ಕಾಲ ಕಳೆಯಬೇಕಾದ ಪರಿಸ್ಥಿತಿ ಬಂತು. ಇದಕ್ಕೆಲ್ಲಾ ಮುಖ್ಯ ಕಾರಣ ಸರ್ಕಾರದವರು ನಿಶ್ಚಿತವಾಗಿ ಯಾವ ವಿಷಯವನ್ನೂ ತಿಳಿಸದಿರುವುದು. ವಿಷಯಗಳ ಬಗ್ಗೆ ಪರಿಪೂರ್ಣವಾದ ವಿವರಗಳಿಲ್ಲದಿದ್ದರೆ ಹೀಗಾಗುವುದು ಅನಿವಾರ್ಯ. ಈ ಹೊತ್ತು ಸ್ಪೀಕರ್‌ರವರು ರೂಲಿಂಗ್ ಕೊಡಲೆದ್ದಾಗ, ಸ್ಪೀಕರ್ ಅವರು ಈ ಬಗ್ಗೆ ವಿಚಾರಣೆ ಮುಗಿದಿದೆಯೆಂದು ತಿಳಿದುಬಂದಿದೆಯೆಂದು ಹೇಳಲುಪಕ್ರಮಿಸಿದಾಗ ಮಂತ್ರಿಗಳು ಇನ್ನೂ ವರದಿ ಪೂರೈಸಿಲ್ಲವೆಂದು ಹೇಳಿದರು. ಇದರಿಂದ ಏನಾಯಿತು? ವಿರಾಮಕಾಲವಾದಮೇಲೆ ರೂಲಿಂಗ್ ಕೊಡುವುದಾಗಿ ಸ್ಪೀಕರ್ ಹೇಳಬೇಕಾಗಿಬಂತು. ಒಂದುವೇಳೆ ಸ್ಪೀಕರ್ ಅವರಿಗೆ ಅಡ್ವೊಕೇಟ್ ಜನರಲ್ ರಿಂದ ವಿವರಗಳು ಬೇಕಾಗಿದ್ದರೆ ಪೂರ್ಣ ವಿವರಗಳನ್ನು ತರಿಸಿಕೊಡಬೇಕಾಗಿತ್ತು.

Mr. DEPUTY SPEAKER.—It is not now necessary to speak on the ruling. ತಾವು ವೋಟ್ on account ವಿಚಾರದಲ್ಲಿ ಮಾತನಾಡಿ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ನಾನು ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರವಾಗಿ ಮಾತನಾಡುತ್ತಾ ಆಡಳಿತ ಯಂತ್ರ ಹೇಗೆ ಸಡಿಲವಾಗಿದೆಯೆಂದು ಹೇಳುತ್ತಿದ್ದೇನೆ. ನಾನೀಗ ಒಂದು ಉದಾಹರಣೆಯನ್ನು ಮಾತ್ರ ಕೊಟ್ಟೆ, ಆ ವಿಚಾರ ಹೆಚ್ಚಿಗೆ ಹೇಳಲು ನಾನು ಇಷ್ಟಪಡುವುದಿಲ್ಲ. ಮುಖ್ಯವಾಗಿ ಇಂಥ ಪರಿಸ್ಥಿತಿ ಮುಂದೆ ಬರಬಾರದೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ ಅಷ್ಟೆ.

ಇನ್ನು ಕೆಲಸಕಾರ್ಯಗಳು ಯಾವರೀತಿ ಆಗಬೇಕೋ ಆ ರೀತಿ ಆಗುತ್ತಿಲ್ಲವೆಂಬುದಕ್ಕೆ ಡಿಸ್ಟ್ರಿಕ್ಟ್ ಬೋರ್ಡ್‌ಗಳ ಸ್ಥಿತಿಯೇ ಸಾಕು. ಹೋದ ಅಧಿವೇಶನದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್‌ಗಳ ವಿಚಾರದಲ್ಲಿ ಆಖೈರಾಗಿ ಯಾವುದಾದರೊಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಕೆಲವು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಏಳು ಎಂಟು ವರ್ಷಗಳಿಂದಲೂ ಚುನಾವಣೆಗಳೇ ಆಗಿಲ್ಲ. ಅವು ಇರುತ್ತವೆಯೋ ಅಥವಾ ಹೋಗುತ್ತವೆಯೋ ಒಂದೂ ತೀರ್ಮಾನವಾಗಿಲ್ಲ. ಮುಂದಿನ ಅಧಿವೇಶನದೊಳಗೆ ಏನಾದರೊಂದು ಈ ಬಗ್ಗೆ ತಿಳಿಸುವುದಾಗಿ ಹೇಳಿದರು. ಇನ್ನೂ ಏನೂ ಹೇಳಿಲ್ಲ. ಹೀಗೆ ಒಂದೊಂದು ಬಾಬಿನಲ್ಲೂ ಅನೇಕ ನಿದರ್ಶನಗಳಿವೆ. ಜನರಲ್ ಬಡ್ಜೆಟ್ ಮೇಲೆ ಮಾತನಾಡುವಾಗ ಅದನ್ನೆಲ್ಲಾ ಹೇಳುತ್ತೇನೆ. ಮುಖ್ಯವಾಗಿ ಈ ಕೆಲಸ ಕಾರ್ಯಗಳು ಬೇಗ ಬೇಗ ನಡೆಯಬೇಕೆಂದು ಮಂತ್ರಿಗಳು ಮುತುವರ್ಜಿಯಿಂದಿದ್ದರೂ, ಯಂತ್ರ ಸರಿಯಾಗಿಲ್ಲದೆ ಇದ್ದು ಕೆಲಸಗಳು ನಡೆಯುತ್ತಿಲ್ಲ. ಮಂತ್ರಿಗಳಿಗೆ ಸಲಕರಣೆಗಳು ಸರಿಯಾಗಿಲ್ಲದಿದ್ದರೆ ಅವರೇನು ಮಾಡಿಯಾರು? ಆದ್ದರಿಂದ ನಾನು ಆಡಳಿತಪಕ್ಷಕ್ಕೆ ಸೇರಿದವನಾದರೂ ಇದನ್ನು ಹೇಳಬೇಕಾಗಿ ಬಂದಿದೆ. ಏಕೆಂದರೆ, ರಾಜ್ಯದಲ್ಲಿ ಸರಿಯಾದ ಸರ್ಕಾರವನ್ನು ನಡೆಸತಕ್ಕ ಹೊಣೆ ಮಂತ್ರಿಗಳಿಗೆ ಎಷ್ಟಿದೆಯೋ, ಅಷ್ಟೇಮಟ್ಟಿಗೆ ಈ ಸಭಾ ಸದಸ್ಯರಿಗೂ ಇದೆ.

ಸ್ಟಾಂಪ್‌ಗಳ ವಿಚಾರ ಹೇಳುತ್ತೇನೆ. Copying sheet ಮತ್ತು ಸ್ಟಾಂಪ್‌ಗಳಿಗೆ ಎಲ್ಲಾಕಡೆಯಲ್ಲೂ ಈಗ ಅಭಾವಬಂದಿದೆ, ಮುಂಚೆ ಎಷ್ಟು ಬೇಕಾದರೂ ಸಿಕ್ಕುತ್ತಿತ್ತು. ಈಚೆಗೆ ಆರು ತಿಂಗಳಿಂದ ಯಾವ ಕೋರ್ಟಿನಲ್ಲಿ ಕೇಳಿದರೂ ಸಿಕ್ಕುತ್ತಿಲ್ಲ. ಏಕೆ ಹೀಗಾಯಿತೆಂದು ಯಾರೂ ವಿಚಾರ ಮಾಡಿದಹಾಗೆ ಕಾಣುವುದಿಲ್ಲ. ಇದನ್ನೇಕೆ ಹೇಳುತ್ತಿದ್ದೇನೆಂದರೆ, ದಾವೆಗಳನ್ನು ಹಾಕುವ ಜನರಿಗೆ ಎಷ್ಟು ಕಷ್ಟವಾಗುತ್ತದೆಂಬುದನ್ನು ಯೋಚನೆಮಾಡಬೇಡವೇ, ಸರ್ಕಾರ?

ಇನ್ನು ಪೋಲೀಸ್ ಇಲಾಖೆಯ ವಿಚಾರದಲ್ಲಿ ನಾನು ಬಹಳವಾಗಿ ಮಾತನಾಡಬೇಕಾಗಿದೆ. ಆ ಡಿಮ್ಯಾಂಡ್ ಚರ್ಚೆಗೆ ಬಂದಾಗ ವಿಶದವಾಗಿ ಮಾತನಾಡುತ್ತೇನೆ. ಸದ್ಯಕ್ಕೆ ಇಷ್ಟು ಹೇಳಲಿಚ್ಛಿಸುತ್ತೇನೆ. ಇದರ ಸತ್ಯಾಸತ್ಯತೆಯ ವಿಚಾರವನ್ನು ಮಂತ್ರಿಗಳೇ ಕೂಲಂಕಷವಾಗಿ ವಿಮರ್ಶಿಸಲಿ. ಪೋಲೀಸ ಇಲಾಖೆಯ ಆಡಳಿತದ ಮೇಲೆ ಈಗೀಗ ಬಹಳ ದೂರುಗಳು ಬರುತ್ತಿವೆ. ಕೆಲವು ಸಂದರ್ಭಗಳಲ್ಲಿ interestedness ನಿಂದ ಹೀಗೆ ನಡೆಯುತ್ತಿದೆಯೆಂದು ಹೇಳಬಹುದು.

*Sri J. H. SHAMSUDDIN.—Sir, I rise to support Demand No. 7–Land Revenue. Though the scope of the discussion is enlarged, I will confine myself to the particular Demand No. 7, Land Revenue. In this respect I would first examine the figures from a financial point of view. I find here under Land Revenue, an attempt is generally made by the Finance Department not to anticipate or assess the relevant revenue and expenditure. I

(SRI J. H. SHAMSUDDIN)

thought that was the feature of last year only, because it was first year of integration and naturally the concerned departments had not sufficient figures to compile. But, I feel even now the same tendency is adopted in this year's Budget. I will illustrate my point this way. If one looks to the Budget of 1957-1958 and compares it with 1958-1959, my point will be clear. There are several items of anticipated receipts and expenditure which have not been mentioned. Such a feature should be recorded in a budgetary arrangement because that will speak whether the department is properly geared up or could not properly assess its requirements both from the revenue side as well as expenditure side. Of course I do not know if proper explanations were given for a large saving either on the expenditure side or anticipated income. If they had been given, then, it would not be proper on my part in offering these remarks. But, explanations given are scanty or do not clear my doubts. For example, take 'ordinary revenue' on page 14. Budget estimate is Rs. 384.83 lakhs, revised estimate is Rs. 348.91 lakhs. So, there is a vast lacuna between estimate and the actuals. Proper explanation for this difference is not given. Of course, one of the explanations given is rather criptical or elusive, in a manner that does not make clear thinking. It is stated that a decrease of Rs. 35.92 lakhs in the revised estimate is on the basis of progress of collections and is also due to scarcity conditions in certain areas.

It is not clear whether the progress of collection is slow or has quickened. Now I understand that the collection is slow. I would like to bring it to the notice of the Department concerned that there are large arrears of land revenue and the machinery of collection is very slow and therefore in the budget estimates the difference between the actuals and the estimates will recur year after year, if the machinery for collection of arrears is not geared or whipped up. There are several other reasons for this slow rate of progress. I find that the processes mentioned in the land revenue code are not adhered to by the collecting authorities. I am told that there are two ways open to the revenue authorities for enforcement of collection. One is that they can put the land of the defaulter for sale or secondly, they can take recourse to seizure of movable properties. It seems to me that the more effective remedy is taking advantage of the provision for seizure of movables, though it is a little irksome and the officers may feel that this process would incur the displeasure of the villager concerned. But it is worth taking the trouble because it is in the interest of the villager himself not to accumulate the arrears, because he would find it extremely difficult to pay them in a lump. The method of seizure of movables would be more effective inas much as if the Amildar or anybody on his behalf should say that such and such person's movables would be seized, the villager concerned would feel that his prestige is at stake and he would manage to pay the land revenue. There is thus a psychological effect in the seizure of movables than in the attachment of immovables. This method, though provided for in the Land Revenue Code, is not taken advantage of by the revenue-authorities. This is one of the reasons why land revenue arrears are piling up, the budgetary position is being affected and there is such a wide gap between the actuals and estimates. Therefore the Department should examine the possibility of taking the villagers into confidence by telling them publicly that henceforward Government may seize movable properties if land revenue is not paid in time and therefore they should avoid the irksomeness that would follow.

Another method is attachment of immovable property. There are two ways open here. One method is to put up a certain serial of immovable property for auction. What usually happens is there are no bidders, because the villagers do not want to bid on properties belonging to their neighbours and thus incur their displeasure. Then the second list is put

for auction and thus the matter is delayed indefinitely. I feel there is only one method, *i.e.*, for the Government to resume the land and put it on its Khatta so that it could be distributed to the landless. I would like the Government to examine these proposals and see that the collection work is geared up so that budgetary position improves.

Sir, there were some comments about the services. I would not go into the details, but I would like to point out that the way to assess efficiency would be by comparison of the past and the present. Unless we have a clear picture of the past years, it would be uncharitable to criticise the services on an invidious basis. One of the remarks was that efficiency has suffered on account of the inclusion of the I.A.S. and I.P.S. I think this is not a just remark. These persons have been selected on an all-India basis. The idea is to pool the experience of the administrative services and then distribute them to all the States. To say that because they have come from different parts of India, they are unaware of the conditions in this State and hence administration is impaired, is not the correct approach. On the other hand it has been felt both by the Central and State Governments that people coming from outside have broader vision and can tackle problems without local bias. But I must point out that the services could function efficiently only if a proper atmosphere is created. It is upto us legislators to create that atmosphere which would be conducive for and promote better efficiency in the services. But to criticise the services, without trying to understand their problems, would have a demoralising effect.

This is all I wanted to say at the moment, Sir.

ಶ್ರೀ ವೈ. ಮಂಜಯ್ಯಶೆಟ್ಟಿ (ಬೈಂದೂರು).—ಮಾನ್ಯ ಉಪಸಭಾಪತಿಗಳೇ, ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳಲು ಇಚ್ಛಿಸುತ್ತೇನೆ. ನಮ್ಮ ರಾಜ್ಯವನ್ನು ಸುಖೀರಾಜ್ಯವನ್ನಾಗಿ ಮಾಡಬೇಕೆಂದು ನಮ್ಮ ಸರಕಾರ ಪಾಂಚವಾರ್ಷಿಕ ಯೋಜನೆಯ ಮೂಲಕ ಅನೇಕ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡಿದ್ದಾರೆ. ಅದು ಮಾತ್ರವಲ್ಲ. ಆ ಕಾರ್ಯಗಳನ್ನು ಕಾರ್ಯರೂಪಕ್ಕೆ ಸಹ ತಂದಿದ್ದಾರೆ. ಆದರೆ ಈಗ ನಾವು ಐದು ಬೇರೆ ಬೇರೆ ರಾಜ್ಯಗಳಲ್ಲಿದ್ದವರು ಒಂದು ರಾಜ್ಯವನ್ನಾಗಿ ಮಾಡಿಕೊಂಡಿರುವುದರಿಂದ ಆಡಳಿತದ ವಿಷಯದಲ್ಲಿ ಅನೇಕ ತೊಂದರೆತೊಡಕುಗಳು ಬಂದದ್ದರಿಂದ ಪಾಂಚವಾರ್ಷಿಕ ಯೋಜನೆಯ ಮೇರೆಗೆ ಇಟ್ಟುಕೊಂಡ ಅನೇಕ ಯೋಜನೆಗಳು ಬೇಕಾದ ಮಟ್ಟವನ್ನು ಮತ್ತು ಗುರಿಯನ್ನು ತಲಪಲಿಲ್ಲ ಎಂದು ಹೇಳಲು ವಿಷಾದವಾಗುತ್ತದೆ. ಹಾಗಿದ್ದಾಗ್ಯೂ ಇನ್ನು ಮುಂದೆ ಈ ಯೋಜನೆ ಸಫಲಗೊಳ್ಳುವಂತೆ ತಾವು ಕೈಗೊಂಡ ಕಾರ್ಯಗಳನ್ನು ಬಹಳ ಆಸಕ್ತಿಯಿಂದ ಮಾಡುತ್ತಿರುವುದಾಗಿ ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವುದು ಬಹಳ ಸಂತೋಷ ಎಂದು ಹೇಳುವುದು ಮಾತ್ರವಲ್ಲ ಮತ್ತು ಆ ಪ್ರಕಾರ ಕಾರ್ಯವನ್ನು ಮಾಡಿಯಾರು ಎನ್ನುವ ಭರವಸೆ ನಮ್ಮಲ್ಲಿದೆ. ಈ ಸಂದರ್ಭದಲ್ಲಿ ಈ ವರ್ಷ ನಮ್ಮ ಮುಂದೆ ಇಟ್ಟ ಆಯುವ್ಯಯ ಪಟ್ಟಿಯಲ್ಲಿ ಅನೇಕ ಅಭಿವೃದ್ಧಿಕಾರ್ಯಗಳನ್ನು ತೋರಿಸಿದ್ದಾರೆ.

ಆ ಎಲ್ಲಾ ಕಾರ್ಯಗಳನ್ನೂ ಮುಂದಿನ ವರ್ಷದಲ್ಲಿ ಅತಿ ಶೀಘ್ರದಲ್ಲಿ ಆಗುವಂತೆ ಆಡಳಿತದವರು ಪ್ರಯತ್ನ ಮಾಡಬೇಕಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಅವರೊಡವೆ ಅತಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಏನೋ ಐದು ರಾಜ್ಯ ಕೂಡಿ ಒಂದು ರಾಜ್ಯ ಆದಾಗ್ಯೂ ನಮ್ಮ ಮೋಟಾರ್ ಸಾರಿಗೆ ವಿಷಯದಲ್ಲಿ ಐದು ರಾಜ್ಯದಲ್ಲಿ ಮೊದಲು ಇದ್ದಂತೆಯೇ ಈಗಲೂ ಇರುವುದು ಕಂಡುಬರುತ್ತದೆ. ಮಾನ್ಯ ಮಂತ್ರಿಗಳಾದ ಶ್ರೀ ಪೂಣಚ್ಚನವರು ನಾನು ಹೇಳುವುದನ್ನು ಬಹಳ ಆಕಾಂಕ್ಷೆಯಿಂದ ಕೇಳುತ್ತಾ ಇರುವುದು ಬಹಳ ಸಂತೋಷ. ಹಿಂದೆ ಬೊಂಬಾಯಿ ಸಂಸ್ಥಾನದಲ್ಲಿ ಮೋಟಾರ್ ಸಾರಿಗೆ ವ್ಯವಸ್ಥೆಯನ್ನು ಸರ್ಕಾರವೇ ವಹಿಸಿಕೊಂಡು ಈಗ ಅದನ್ನ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿದೆ. ಈಗ ಉತ್ತರ ಕರ್ಣಾಟಕದ ಭಟ್‌ಕಲ್‌ನಿಂದ ಬೈಂದೂರುವರೆಗೂ ಇರುವ ಪ್ರದೇಶದಲ್ಲಿ ಒಂದೇ ಸ್ಟೇಟಿನಲ್ಲಿ ಇದ್ದಾಗ್ಯೂ ಭಟ್‌ಕಲ್‌ನಿಂದ ಬೈಂದೂರಿಗೆ ಹೋಗುವ ಪ್ರಯಾಣಿಕರು ಮಧ್ಯದಾರಿಯಲ್ಲಿ ಅಡವಿಯಲ್ಲಿ ಬಸ್ಸನ್ನು ಬದಲಾಯಿಸುವ ಪ್ರಸಂಗ ಇದೆ. ಅದರಂತೆ ಶಿವಮೊಗ್ಗದಿಂದ, ಕುಂದಾಪುರಕ್ಕೆ ಹೋಗುವಾಗ ಮಧ್ಯೆ ಅಡವಿಯಲ್ಲಿ ಬಸ್ಸನ್ನು ಬದಲಾಯಿಸಬೇಕಾಗುತ್ತದೆ. ಅಲ್ಲಿ ಒಂದು ಹೋಟಲೂ ಇಲ್ಲ, ಊಟದ ವ್ಯವಸ್ಥೆಯಿಲ್ಲ, ಮಳೆಗಾದಲ್ಲಿ ಅನೇಕ ಪ್ರಯಾಣಿಕರು ಬಹಳ ಘಂಟೆಗಳಕಾಲ ಅಲ್ಲಿಯೆ ಇದ್ದು ಒಂದು ಬಸ್ಸಿನಿಂದ ಇನ್ನೊಂದು ಬಸ್ಸಿಗೆ ಬದಲಾಯಿಸುವ ಪ್ರಸಂಗ ಇದೆ. ಈ ವಿಷಯವನ್ನು 1957ನೇ ಇಸವಿ ನವಂಬರ್ ಒಂದನೇ ತಾರೀಖು ಶ್ರೀ ಪೂಣಚ್ಚರವರಿಗಿಂತ ಮುಂಚೆ ಮಂತ್ರಿಗಳಗಿದ್ದ ಶ್ರೀ ಎಂ. ವಿ. ರಾಮರಾವ್‌ರವರ ಅವಗಾಹನೆಗೂ ನಂತರ ಶ್ರೀ ಪೂಣಚ್ಚರವರ ಅವಗಾಹನೆಗೂ ತಂದಾಗ್ಯೂ ಈ ಸಣ್ಣ ವಿಷಯದಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದೆ ಇದ್ದುದು ಬಹಳ ವ್ಯಸನಕರ. ಆದ್ದರಿಂದ ದಯವಿಟ್ಟು ಆ ವಿಷಯದಲ್ಲಿ ಮಾನ್ಯ ಮಂತ್ರಿಗಳು ನಿಗಾವನ್ನು ತೋರಿಸಿ ಜನರ ಕಷ್ಟವನ್ನು ಬಗೆಹರಿಸಬೇಕಾಗಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಏನೋ ನಮ್ಮ ಜಿಲ್ಲೆಯಲ್ಲಿ ಸಾಧಾರಣವಾಗಿ ಏಳು ಲಕ್ಷ ಜನ ಸಂಖ್ಯೆ ಇದೆ. ಕಾಸರಗೋಡು ಹೋದುದರಿಂದ ಮೂರು ಲಕ್ಷ ಇಳಿದಿದೆ. ಅಲ್ಲಿಹೆಚ್ಚಿನ ಜನರು ತೆಂಗಿನ ಎಣ್ಣೆಯನ್ನು ಅವರ ಆಹಾರಪದಾರ್ಥವಾಗಿ ಉಪಯೋಗಿಸುವ ಕ್ರಮವನ್ನು ಇಟ್ಟುಕೊಂಡಿದ್ದಾರೆ. ಧಾರ್ವಾಡ ಮತ್ತು ಉತ್ತರ ಕರ್ಣಾಟಕದಲ್ಲಿ ನೆಲಗಡಲೆ ಎಣ್ಣೆಯನ್ನು ಉಪಯೋಗಿಸುವ

(ಶ್ರೀ ವೈ. ಮಂಜಯ್ಯಶೆಟ್ಟಿ)

ಕ್ರಮವನ್ನು ಇಟ್ಟುಕೊಂಡಿದ್ದಾರೆ. ನೆಲಗಡಲೆ ಎಣ್ಣೆ ಉಪಯೋಗಿಸುವ ಜನರು ಸೇಲ್ಸ್‌ಟ್ಯಾಕ್ಸ್ ವಿನಾಯ್ತಿ ಹೊಂದಿದ್ದಾರೆ. ಆದರೆ ತೆಂಗಿನ ಎಣ್ಣೆಯನ್ನು ಉಪಯೋಗಿಸುವ ಹೆಚ್ಚಿನ ಜನರಿಗೆ ಯಾವರೀತಿಯ ವಿನಾಯ್ತಿಯೂ ಇಲ್ಲದೆ ಇದ್ದುದು ಬಹಳ ಪಕ್ಷಪಾತ ಮಾಡಿದಂತಾಗುತ್ತದೆ. ಕಾರವಾರದಲ್ಲಿಯೂ ಸಹ ಹಳ್ಳಿಗಳಲ್ಲಿ ತೆಂಗಿನ ಎಣ್ಣೆಯನ್ನು ಜನರು ತಮ್ಮ ಆಹಾರಪದಾರ್ಥವಾಗಿ ಉಪಯೋಗಿಸುತ್ತಿದ್ದಾರೆ. ತೆಂಗಿನ ಎಣ್ಣೆಯ ಬಾಬಿನಲ್ಲಿ ಮಲ್ಟಿಪಲ್ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ನೆಲಗಡಲೆ ಎಣ್ಣೆಬಾಬಿನಲ್ಲಿ ಸಿಂಗಲ್ ಪಾಯಿಂಟ್ ಸೇಲ್ಸ್‌ಟ್ಯಾಕ್ಸ್ ಹಾಕಿದ್ದಾರೆ. ಈ ವಿಷಯದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಚೇಂಬರ್ ಆಫ್ ಕಾಮರ್ಸ್ ಹಾಗೂ ರೈತರ ಪ್ರತಿನಿಧಿಗಳು ಬಂದು ನಾವೆಲ್ಲರೂ ಒಂದೇ ಸ್ವರದಿಂದ ತೆಂಗಿನ ಎಣ್ಣೆಯಮೇಲೆ ಮಲ್ಟಿ ಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ, ಅದಕ್ಕೆ ವಿನಾಯ್ತಿಮಾಡಬೇಕು ಎಂದು ಮೊರೆ ಇಟ್ಟಾಗ್ಯೂ ಯಾವ ಕಾರ್ಯಕ್ರಮವನ್ನೂ ತೆಗೆದು ಕೊಳ್ಳದೆಇರುವುದು ಬಹಳ ವ್ಯಸನಕರ. ಶ್ರೀ ಮರಿಯಪ್ಪನವರು ಖಾಯಿಲೆಯಲ್ಲಿ ಇದ್ದಾಗ ಅವರ ಚಾರ್ಜಿನಲ್ಲಿದ್ದ ನಮ್ಮ ಊರಿನ ಮಂತ್ರಿಗಳಾದ ಶ್ರೀ ವೈಕುಂಠ ಬಾಳಿಗರವರು ಸಹ ನಮ್ಮ ಕಷ್ಟವನ್ನು ಪರಿಹರಿಸದೆ ಇದ್ದುದು ವ್ಯಸನಕರ. ದಯವಿಟ್ಟು ಮಂತ್ರಿಮಂಡಲದವರು ಆಲೋಚನೆಮಾಡಿ ನಮಗೆ ಅಗತ್ಯವಾದ ವಿನಾಯಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಳ್ಳಿಯ ಜನರಿಗೆ ಔಷಧೋಪಚಾರದ ಬಗ್ಗೆ ಗ್ರಾಮದಲ್ಲಿ ಆಸ್ಪತ್ರೆಗಳು ಅವಶ್ಯಕ. ಸರ್ಕಾರದವರನ್ನು ಕೇಳಿಕೊಂಡರೆ ನಮಗೆ ಬೇಕಾದ ಡಾಕ್ಟರುಗಳು ಸಿಕ್ಕುವುದಿಲ್ಲ. ವೈದ್ಯ ಶಿಕ್ಷಣದಲ್ಲಿ ತರಪೇತು ಹೊಂದಿದವರು ಹಳ್ಳಿಗೆ ಹೋಗಲು ಇಷ್ಟಪಡುವುದಿಲ್ಲ ಎಂದು ಹೇಳುತ್ತಾರೆ. ನಾವು ಮದ್ರಾಸಿನಲ್ಲಿ ಇದ್ದಾಗ ಅಲ್ಲಿದ್ದ ಮಂತ್ರಿಗಳು ಇದೇರೀತಿ ಹೇಳುತ್ತಿದ್ದರು. ಈ ಸಮಸ್ಯೆಯನ್ನು ಬಗೆಹರಿಸುವುದು ಸರ್ಕಾರಕ್ಕೆ ಕಷ್ಟಸಾಧ್ಯವಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಸರ್ಕಾರದ ಮುಂದೆ ಇಡಲು ಇಚ್ಛಿಸುತ್ತೇನೆ. ಸರ್ಕಾರದವರು ಅನೇಕ ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಪ್ರತಿವರ್ಷವೂ ಈ ಮೆಡಿಕಲ್ ಕಾಲೇಜನ್ನು ಸೇರುವ ಬಗ್ಗೆ ಸಾವಿರಾರು ವಿದ್ಯಾರ್ಥಿಗಳು ಆಕಾಂಕ್ಷೆಯಿಂದ ಇದ್ದಾರೆ. ಆದರೆ ಸ್ವಲ್ಪ ಜನರಿಗೆ ಮಾತ್ರ ಈ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕುವುದು ಸಾಧ್ಯ. ಆದ್ದರಿಂದ ಸೀಟು ಕೊಡುವ ಸಂದರ್ಭದಲ್ಲಿ ಸರ್ಕಾರದವರು ಅವರು ಪಾಸು ಆದೊಡನೆ ಕನಿಷ್ಠಪಕ್ಷ ಮೂರು ವರ್ಷ ಕಾಲವಾದರೂ ಹಳ್ಳಿಯಲ್ಲಿ ಹೋಗಿ ಕೆಲಸಮಾಡುವಂತೆ ಅವರಿಂದ ಕಡ್ಡಾಯವಾಗಿ ಒಂದು ಬಾಂಡನ್ನು ತೆಗೆದುಕೊಂಡ ಪಕ್ಷದಲ್ಲಿ ಈ ಕಷ್ಟ ಪರಿಹಾರವಾದೀತು ಎಂದು ನನ್ನ ಭರವಸೆ. ಈ ವಿಷಯದಲ್ಲಿ ಮಾನ್ಯಮಂತ್ರಿಗಳು ಆಲೋಚಿಸಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರಿಕೆಯ ಬಗ್ಗೆ ನಾವು ಆಗಿಂದಾಗ್ಯೆ ಅನೇಕ ಹೇಳಿಕೆಗಳನ್ನು ಮಂತ್ರಿಗಳ ಬಾಯಿಂದಲೇ ಕೇಳುತ್ತಿದ್ದೇವೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಮೀನುಗಾರಿಕೆಯ ಬಗ್ಗೆ 75 ಲಕ್ಷ ರೂಪಾಯಿ ಲಿಂಗಡಿಸಿಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ನಿಜ ಇರಬಹುದ. ಆದರೆ ಅದು ಅಭಿವೃದ್ಧಿ ಹೊಂದಿದ್ದು ಸಾಲದು. ಕೆಲಸವು ಬಹಳ ಜರೂರಿಯಿಂದ ಆಗತಕ್ಕದ್ದಾಗಿದೆ. ಆ ಬಗ್ಗೆ ಅಗತ್ಯವುಳ್ಳ ಡಿಪಾರ್ಟ್‌ಮೆಂಟಿನವರಿಗೆ ಸರ್ಕಾರದವರು ಹೆಚ್ಚಿನ ಸಹಾನ ಭೂತಿಯಿಂದ ಹಣವನ್ನು ಕೊಟ್ಟು ದಯವಿಟ್ಟು ಮೀನುಗಾರಿಕೆಯ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಬಂದರುಗಳ ವಿಷಯ ಹೇಳಬೇಕಾದ ಅಗತ್ಯವಿಲ್ಲ. ಈಗಾಗಲೆ ಸರ್ಕಾರದವರು ಬಂದರುಗಳ ಅಭಿವೃದ್ಧಿಯ ಅವಶ್ಯಕತೆಯನ್ನು ಮನಗಂಡಿದ್ದಾರೆ. ಮೊನ್ನೆತಾನೆ ಶ್ರೀ ಎಸ್. ವಿ. ರಾಮಮೂರ್ತಿಯವರ ಜೊತೆಕೂಡಿ ಅನೇಕ ಮಂತ್ರಿವರ್ಯರು ಬಂದರುಗಳ ಪರಿಶೀಲನೆಯ ಬಗ್ಗೆ ಸಂಬಂಧಪಟ್ಟ ಪ್ರದೇಶಗಳನ್ನು ಸಂದರ್ಶಿಸಿ, ಅನೇಕ ಮಾಹಿತಿಗಳನ್ನು ಪಡೆದಿದ್ದಾರೆ. ಈ ಬಂದರುಗಳ ಅಭಿವೃದ್ಧಿ ಎಷ್ಟು ಆವಶ್ಯಕ ಎನ್ನುವ ವಿಚಾರದಲ್ಲಿ ಶ್ರೀರಾಮಮೂರ್ತಿಯವರು ಕೇಂದ್ರ ಸರ್ಕಾರಕ್ಕೆ ಯೋಗ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಷಯದಲ್ಲಿ ಶ್ರಮಿಸಿದ ನಮ್ಮ ಮಂತ್ರಿವರ್ಯರನ್ನು ಎಷ್ಟು ಕೊಂಡಾಡಿದರೂ ಸಾಲದು. ಇದು ಬರೀ ರಿಪೋರ್ಟಿನಲ್ಲಿ ಉಳಿಯದೆ ಕೇಂದ್ರ ಸರ್ಕಾರದಿಂದ ಸಿಗತಕ್ಕ ಹಣವನ್ನು ಆದಷ್ಟು ಶೀಘ್ರವಾಗಿ ನಮ್ಮ ಸರ್ಕಾರದವರು ಪಡೆದು ಬಂದರುಗಳ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆಎಂದು ನಾನು ಈ ಸಂದರ್ಭದಲ್ಲಿ ಸೂಚಿಸಲು ಇಚ್ಛಿಸುತ್ತೇನೆ. ಏನೋ ದೊಡ್ಡ ಬಂದರುಗಳ ಕಡೆಗೆ ಮಾತ್ರ ಸರ್ಕಾರದವರು ಗಮನ ಕೊಟ್ಟರೆ ಸಾಲದು. ಒಂದು ಸಣ್ಣ ಬಂದರು ನಮ್ಮ ಊರಿನಲ್ಲಿದೆ. ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಲೆಕ್ಕವನ್ನು ನೋಡಿದರೆ ನಮ್ಮ ಜಿಲ್ಲೆಯಲ್ಲಿ ಇದು ಮೂರನೆಯ ಸ್ಥಾನವನ್ನು ಪಡೆದಿದೆ. ಬಂದರುಗಳ ವಿಷಯದಲ್ಲಿ ಹೆಚ್ಚಿನ ಅನುಭವ ನಮ್ಮ ಮಂತ್ರಿಗಳಿಗೆ ಇದೆ. ಅಲ್ಲಿಯ ಜನರು ಅವರಿಗೆ ಹೆಚ್ಚಿನ ಅನುಭವವನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿಸದೆ ಅವು ಹೆಚ್ಚಿನ ಅಭಿವೃದ್ಧಿ ಹೊಂದುವಂತೆ ಪ್ರಯತ್ನಮಾಡಬೇಕೆಂದು ನಾನು ದೈನ್ಯದಿಂದ ಕೇಳಿಕೊಳ್ಳುತ್ತೇನೆ.

12 NOON.

ನಮ್ಮ ಗ್ರಾಮೋದ್ಯೋಗಸ್ಥರು ನಮ್ಮ ರಾಜ್ಯದ ಆಡಳಿತದ ಒಂದು ಜೀವಾಳ. ಅವರ ವಿಷಯದಲ್ಲಿ ಅನೇಕ ಪ್ರಶ್ನಾವಳಿ ಗಳುಅನೇಕ ಸಂದರ್ಭದಲ್ಲಿ ಈ ಸಭೆಯ ಮುಂದೆ ಬಂದಿವೆ. ಸರ್ಕಾರದವರು ಇದನ್ನೆಲ್ಲಾ ಮನಗಂಡು ಇವರ ಸಂಕಷ್ಟಗಳನ್ನು ನಿವಾರಣೆಮಾಡುವ ಉದ್ದೇಶದಿಂದ ಒಬ್ಬ ವಿಶೇಷಾಧಿಕಾರಿಗಳನ್ನು ನೇಮಿಸಿದ್ದಾರೆ ಅವರ; ವರದಿ ಈ ತಿಂಗಳ ಅಂತ್ಯದಲ್ಲಿ ದೊರಕುತ್ತದೆ. ಈಗಾಗಲೆ ಐದು ರಾಜ್ಯಗಳು ಒಟ್ಟುಗೂಡಿರುವ ಈ ರಾಜ್ಯದಲ್ಲಿ ಗ್ರಾಮೋದ್ಯೋಗಸ್ಥರಲ್ಲಿ ಅನೇಕ ಭೇದಗಳಿವೆ. ಅವರಿಗೆ ಉತ್ತಮ ಸಂಬಳಗಳನ್ನು ಕೊಡುವ ಬಗ್ಗೆ ಆದಷ್ಟು ಬೇಗ ತೀರ್ಮಾನಮಾಡಬೇಕು. ಈ ವ್ಯತ್ಯಾಸಗಳನ್ನು ನೀಗಲು ಪ್ರಯತ್ನಿಸಬೇಕು. ಇಲ್ಲದಿದ್ದರೆ ಗ್ರಾಮೋದ್ಯೋಗಿಗಳಲ್ಲಿ ಅತೃಪ್ತಿ ಹೆಚ್ಚುತ್ತದೆ. ಹೀಗಾದರೆ ನಮ್ಮ ರಾಜ್ಯದ ಆಡಳಿತೆ ವ್ಯವಸ್ಥೆ ಸರಿಯಾಗಿ ನಡೆಯಲಿಕ್ಕಿಲ್ಲವೆಂದ ಈ ಸಮಯದಲ್ಲಿ ಹೇಳುತ್ತೇನೆ.

ರಾಷ್ಟ್ರಕಲ್ಯಾಣದ ಬಗ್ಗೆ, ಹಳ್ಳಿಯ ಜನರ ಉದ್ಧಾರದ ಬಗ್ಗೆ, ರಾಷ್ಟ್ರೀಯ ಅಭಿವೃದ್ಧಿ ಯೋಜನೆ, ಸಮಾ

ಜಾಭಿವೃದ್ಧಿ ಯೋಜನೆಗಳನ್ನಿಟ್ಟುಕೊಂಡು ಕಳೆದ ಐದು ವರ್ಷಗಳಲ್ಲಿ ಈ ಯೋಜನೆಗಳ ಮೂಲಕ ಸಾವಿರಾರು ಮೈಲಿಯಷ್ಟು ರಸ್ತೆಗಳನ್ನು ಗ್ರಾಮಾಂತರಗಳಲ್ಲಿ ರಚಿಸಿದ್ದಾರೆ. ಆದರೆ ಆ ರಸ್ತೆಗಳನ್ನು ದುರಸ್ತುಮಾಡುವುದಕ್ಕೆ ಹಣ ಗ್ರಾಮಪಂಚಾಯಿತಿಗಳಲ್ಲಿಯೂ ಡಿಸ್ಟ್ರಿಕ್ಟ್‌ಬೋರ್ಡುಗಳಲ್ಲಿಯೂ ಇಲ್ಲದೇಯಿರುವುದರಿಂದ ಎಷ್ಟೋ ರಸ್ತೆಗಳು ಮಾಯವಾಗಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ಸಂದರ್ಭದಲ್ಲಿ ನಾನು ಟೀಕೆಮಾಡುತ್ತಿದ್ದೇನೆಂದು ಸರ್ಕಾರದವರು ಭಾವಿಸಬಾರದು. ದಯವಿಟ್ಟು ಆ ರಸ್ತೆಗಳನ್ನು ಜಾಗ್ರತೆಯಾಗಿ ಸಂಬಂಧಪಟ್ಟ ಪಂಚಾಯಿತಿಗಳಿಗೋ ಡಿಸ್ಟ್ರಿಕ್ಟ್‌ಬೋರ್ಡುಗಳಿಗೋ ವಹಿಸಿ, ಅವುಗಳ ರಿಪೇರಿಗೆ ಬೇಕಾದ ಹಣವನ್ನೊದಗಿಸಿಕೊಟ್ಟು ಆ ಜನರ ಅನುಕೂಲಕ್ಕಾಗಿ ಆ ಹಳ್ಳಿಗಳ ಮಾರ್ಗಗಳನ್ನು ಉಳಿಸಿಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯ ಎಷ್ಟೋ ಪಂಚಾಯಿತಿಗಳಿಗೆ ಸರ್ಕಾರದಿಂದ ನ್ಯಾಯವಾಗಿ ಸಿಕ್ಕಬೇಕಾದ ಹಣ ಕಾಸು ಇದುವರೆಗೂ ಸಿಕ್ಕಿಲ್ಲವೆಂಬ ದೂರಿದೆ. ಸಂಬಂಧಪಟ್ಟ ಮಂತ್ರಿಗಳು ಈ ವಿಷಯದಲ್ಲಿ ಪರಿಶೀಲನೆ ನಡೆಸಿ ಆ ಪಂಚಾಯಿತಿಗಳಿಗೆ ಹೆಚ್ಚಿನ ಹಣ, ಎಂದರೆ, ನ್ಯಾಯವಾಗಿ ದೊರಕಬೇಕಾದ ಹಣವನ್ನು ಕೂಡಲೆ ಮಂಜೂರುಮಾಡಬೇಕೆಂದು ಹೇಳಿ ಈ ನನ್ನ ಪುಟ್ಟ ಭಾಷಣವನ್ನು ಅಂತ್ಯಗೊಳಿಸ ತ್ತೇನೆ.

*ಶ್ರೀ ಆಲೂರು ಹನುಮಂತಪ್ಪ (ನೆಲಮಂಗಲ).—ಮಾನ್ಯ ಸಭಾಪತಿಗಳೆ, ಇದುವರೆಗೆ ಮಾನ್ಯ ಸ್ನೇಹಿತರು ಅನೇಕ ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ನಾನು ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದೆ, ಆದರೆ ನನಗೆ ಕೊಟ್ಟಿರುವ ಸ್ವಲ್ಪ ಅವಕಾಶದಲ್ಲಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಹಾಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಆಯವ್ಯಯ ಪಟ್ಟಿಯ ಮೇಲೆ ಮಾತನಾಡುವಾಗ ರೆವಿನ್ಯೂ ಇಲಾಖೆ ಈಗ ಎಷ್ಟುಮಟ್ಟಿಗೆ ನಮ್ಮ ಹಳ್ಳಿಗಾಡಿನ ರೈತರ ನೆರವಿಗಾಗಿ, ಅವರ ಏಳಿಗೆಗಾಗಿ ದುಡಿಯುತ್ತಿದೆಎನ್ನುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಭಾರತ ಸರ್ಕಾರ ಅಥವ ಮೈಸೂರು ಸರ್ಕಾರ ಈಗಾಗಲೇ ಅನೇಕ ಯೋಜನೆಗಳನ್ನು ನಮ್ಮ ಹಳ್ಳಿಗಾಡಿಗಾಗಿ ತಯಾರಿಸಿಟ್ಟಿದ್ದಾರೆ. ಈ ಯೋಜನೆಗಳ ಫಲ ಪ್ರತಿ ಕುಟುಂಬಕ್ಕೂ ಪ್ರತಿ ಗ್ರಾಮಕ್ಕೂ ಹೋಗುತ್ತಿದೆಯೇ, ಅವರ ಸಮಸ್ಯೆಗಳು ಪರಿಹಾರವಾಗುತ್ತಿವೆಯೇ ಎಂದು ನೋಡಿದರೆ, ಇವುಗಳ ಸಂಬಂಧವಾಗಿ ಇಲಾಖೆಗಳು ಜಾಸ್ತಿಯಾಗಿ ತೊಡಕುಗಳು ಜಾಸ್ತಿಯಾಗಿವೆ, ಹಣ ಖರ್ಚಾಗುತ್ತಿದೆ. ಆದರೆ ದೊರಕಬೇಕಾದ ಸೌಲಭ್ಯಗಳು ಬಹಳ ಕಡಮೆ ದೊರಕುತ್ತಿವೆ, ಸಮರ್ಪಕವಾಗಿಲ್ಲ. ಏನೂ ತಿಳಿಯದೇಇರುವ ರೈತನಿಗೆ ಈ ಯೋಜನೆಗಳ ಪ್ರಯೋಜನ ಬಹಳ ಕಡಮೆ ಪ್ರಮಾಣದಲ್ಲಿ ಸಿಕ್ಕುತ್ತದೆ. ಇದರ ಕಾರಣವೇನೆಂದು ಪ್ರತಿ ತಾಲ್ಲೂಕಿನ ವಿಚಾರದಲ್ಲಿ ಯೋಚನೆ ಮಾಡಿದರೆ, ಪ್ರತಿಯೊಬ್ಬ ರೈತನ ಕಷ್ಟ ಸುಖಗಳೇನೆಂದು ವಿಚಾರ ಮಾಡಿದರೆ ಆಗ ಗೊತ್ತಾಗುತ್ತದೆ. ಖಾತೆ ಬದಲಾವಣೆ ಮಾಡುವ ವಿಚಾರದಲ್ಲಿ ಎಷ್ಟು ತಾತ್ಸಾರ ಮಾಡಿದ್ದಾರೆಂದರೆ, ಹತ್ತು ಹದಿನೈದು ವರ್ಷಗಳಿಂದಲೂ ಬದಲಾವಣೆಯಾಗದೆ ಹಾಗೆಯೇ ಇರುವ ಸಂದರ್ಭಗಳಿವೆ. ಇದಕ್ಕೆ ಕಾರಣವೇನು ? ಸಿಬ್ಬಂದಿ ಇಲ್ಲವೆ ಅಥವ ಸರ್ಕಾರ ಇಲಾಖೆಯು ಮೇಲೆ ಸರಿಯಾದ ಹತೋಟಿಯನ್ನಿಟ್ಟು ಕಾರ್ಯಕ್ರಮ ತೆಗೆದುಕೊಂಡಿಲ್ಲವೇ ?

Sri A. BHEEMAPPA NAIK (Challakere).—I rise to a point of order, Sir. There is no quorum in the House.

Sri A. V. NARASIMHA REDDY (Bangalore South).—Sir, 21 is the number required for quorum. There are more than 21 members in the House now.

ಶ್ರೀ ಆಲೂರು ಹನುಮಂತಪ್ಪ.—ಖಾತೆಗಳನ್ನೂ ಬದಲಾವಣೆ ಮಾಡದೇಯಿರುವ ಕಾರಣ, ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ಅಥವ ಬೇರೆ ಯೋಜನೆಗಳಿಂದ ದೊರೆಯುವ ಸೌಲಭ್ಯಗಳು ರೈತರಿಗೆ ದೊರೆಯುವುದಕ್ಕೆ ಅವಕಾಶವಾಗುತ್ತಿಲ್ಲ. ಅಲ್ಲದೆ ರೈತರಿಗೆ ಸಾಲಗಳನ್ನು ಕೊಡಲು ಖಾತೆ ಅವರ ಹೆಸರಿನಲ್ಲಿ ಇರಬೇಕಾದುದು ಅತ್ಯಾವಶ್ಯಕ. ಈ ಕೊರತೆಗಳನ್ನು ಹೋಗಲಾಡಿಸದೇ ಹೋದರೆ, ರೈತನಿಗೆ ಸಾಲ ಸಿಕ್ಕುವುದು ಅಸಂಭವ, ರೈತರು ತಮ್ಮ ಜೀವನದ ಮಟ್ಟವನ್ನು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಜರೂರಾಗಿ ರೆವಿನ್ಯೂ ಇಲಾಖೆಯವರು ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು ಸರಿಯಾದ ಸಿಬ್ಬಂದಿಯನ್ನು ಪ್ರತಿ ತಾಲ್ಲೂಕಿಗೂ ಕೊಟ್ಟು ಹದಿನೈದುವರ್ಷಗಳ ಈ ತೊಡಕನ್ನು ತಕ್ಷಣ ನಿವಾರಣೆಮಾಡಬೇಕು. ಇಲ್ಲದಿದ್ದರೆ ಯಾವಯೋಜನೆಯೂ ಫಲಪ್ರದವಾಗುವುದಿಲ್ಲ. ರೈತರಿಗೆ ಸೌಲಭ್ಯ ಸಿಕ್ಕುವುದಿಲ್ಲ. ರೈತರಿಗೆ ಬಾವಿತೋಡುವುದಕ್ಕೆ, ಮನೆಗಳನ್ನು ಕಟ್ಟುವುದಕ್ಕೆ ಮತ್ತು ಕೈಗಾರಿಕೆಗೆ ಕೊಡತಕ್ಕ ಸಾಲ ಖಾತೆ ಅವರವರ ಹೆಸರಿನಲ್ಲಿಲ್ಲದೇ ಹೋದರೆ ದೊರಕುವುದಿಲ್ಲ.

ಕೈಗಾರಿಕೋದ್ಯಮ ಎಷ್ಟುಮಟ್ಟಿಗೆ ಹಳ್ಳಿಗಳಲ್ಲಿ ಉಪ ಕಸಬಾಗುತ್ತಿದೆ ಎಂದರೆ, ಇದು ಶೋಚನೀಯ ಸ್ಥಿತಿಯಲ್ಲಿದೆ. ದೊಡ್ಡ ಪಟ್ಟಣಗಳಲ್ಲಿ ವಸ್ತು ಪ್ರದರ್ಶನ, ಕೈಗಾರಿಕಾ ಪ್ರದರ್ಶನಗಳನ್ನು ಮಾಡಬಹುದು. ಇವನ್ನು ನೂರಾರು ಸಾವಿರಾರು ಮಂದಿ ಪಟ್ಟಣವಾಸಿಗಳು ನೋಡಿ ಆನಂದ ಪಡಬಹುದಾಗಿದೆ. ಆದರೆ ರೈತನಿಗೆ ಇದರ ಫಲ ದೊರೆಯುವುದಿಲ್ಲ, ಇದು ಹಳ್ಳಿಗಳಲ್ಲಿ ಪ್ರಚಾರವಾಗಬೇಕು. ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಹಳ್ಳಿಗಳ ಕಡೆ ನಿರುದ್ಯೋಗ ಬೆಳೆಯುತ್ತಿದೆ, ಇದನ್ನು ಹೋಗಲಾಡಿಸಲು ಕೈಗಾರಿಕಾಭಿವೃದ್ಧಿ ಸಾಧನ. ಹಳ್ಳಿಗಳಲ್ಲಿ ತಯಾರಾಗುವ ಸಾಮಾನುಗಳು ಮಾರಾಟವಾಗುವುದಕ್ಕೆ ತಕ್ಕ ಅನುಕೂಲಮಾಡಿಲ್ಲ. ಇದರಿಂದ ಅಲ್ಲಿ ಕೈಗಾರಿಕೆ ಬೆಳೆಯುವುದಿಲ್ಲ, ರೈತನಿಗೆ ಫಲದೊರಕುವುದಿಲ್ಲ. ಇಲಾಖೆಗಳ ಜಾಸ್ತಿಯಾಗಿವೆ, ಖರ್ಚು ಜಾಸ್ತಿಯಾಗಿದೆ, ಆದರೆ ರೈತನ ಏಳಿಗೆಯನ್ನು ಸಾಧಿಸಬೇಕೆಂದು ಏನು ಯೋಚನೆ ಮಾಡುತ್ತೇವೋ ಅದು ಫಲಪ್ರದವಾಗುವುದಿಲ್ಲ. ಎಲ್ಲ ಇಲಾಖೆಗಳಿಗೂ ಸಂಬಂಧಪಟ್ಟ ಹಾಗೆ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಅಧಿಕಾರಿಗಳ ಮೇಲೆ ಹಾಕಬೇಕೆಂದು ಕೆಲವು ಸ್ನೇಹಿತರು ಹೇಳುತ್ತಾರೆ. ಆದರೆ ಈ ದಿವಸ ಒಂದು ರೀತಿಯ ಅಸಡ್ಡೆಯ ಮನೋಭಾವ ಅಧಿಕಾರ ವರ್ಗದಲ್ಲಿದೆ ಎಂದು ಹೇಳಬೇಕಾಗಿದೆ. ಇಷ್ಟೊಂದು ಯೋಜನೆಗಳನ್ನು ಮಾಡಿದರೂ ಇವರ ಮನೋಭಾವ ಹೀಗಿದ್ದರೆ, ದೇಶದಲ್ಲಿ ನೂರಕ್ಕೆ ಎಂಭತ್ತರಷ್ಟಿರುವ ರೈತರ ಏಳಿಗೆಯನ್ನು ಎಷ್ಟು ವರ್ಷಗಳಲ್ಲಿ ತಾನೆ ಸಾಧಿಸಲು ಸಾಧ್ಯ ? ಇದನ್ನು ಸಾಧಿಸಬೇಕಾದರೆ, ಅಧಿಕಾರವರ್ಗದ ಮನೋಭಾವ, ರೀತಿ ನೀತಿಗಳು ಬದಲಾವಣೆಯಾಗಬೇಕು. ಇದನ್ನು ನಾವು ಯೋಚನೆ

(ಶ್ರೀ ಆಲೂರು ಹನುಮಂತಪ್ಪ)

ಮಾಡದೇ ಹೋದರೆ ಯಾವ ಯೋಜನೆಗಳೂ ಫಲ ವಾಗುವುದಿಲ್ಲ, ರೈತನಿಗೆ ಇವುಗಳ ಫಲ ದೊರಕುವು ದಿಲ್ಲ.

ಉಪಾಧ್ಯಕ್ಷರು.—ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆಯಲ್ಲಿ ಮಾತನಾಡಲು ಅವಕಾಶವಿರುತ್ತದೆ.

ಶ್ರೀ ಆಲೂರು ಹನುಮಂತಪ್ಪ.—ಮುಖ್ಯವಾಗಿ ರೆವೆನ್ಯೂಗೆ ಸಂಬಂಧಪಟ್ಟ ಹಾಗೆ ಖಾತೆ ಬದಲಾವಣೆ ಮಾಡುವುದು, ಗ್ರಾಮಪಂಚಾಯಿತಿ ವಿಷಯದಲ್ಲಿ ರೆವೆನ್ಯೂ ಇಲಾಖೆ ಅದರ ಲೆಕ್ಕ ಆಡಿಟ್ ಮಾಡಿ ಆಯವ್ಯಯಪಟ್ಟಿಯನ್ನು ತಕ್ಷಣ ಸರಿಪಡಿಸುವುದು, ಗ್ರಾಮಪಂಚಾಯಿತಿಗೆ ಅದರ ಏಳಿಗೆಗಾಗಿ ಕೊಡುವ ಸಹಾಯ ತಕ್ಷಣಕೊಟ್ಟು ಅವನ್ನು ಕಾಪಾಡುವುದು ಈ ವಿಷಯಗಳಲ್ಲಿ ಸರ್ಕಾರದವರು ತಕ್ಷಣ ಮನಸ್ಸಿಟ್ಟು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. P. DEENADAYALU NAIDU.—Sir, I am very much reluctant to speak to-day. The reason for that is that there are certain properties of which we should have been proud as belonging to the State of Mysore, but which have not come to the possession of our State in spite of our efforts for the last seven or eight years. I am sorry that Government has not focussed its attention on this matter. This is a matter about which we had conducted certain negotiations with the Government of India. There are certain lands by the side of the Residency which really belong to the Government of Mysore, but certain army camps have come up there and those lands have been taken away from the Government of Mysore and not a single pie is given by way of rent to the Mysore Government. This has gone on for the last seven or eight years with the result that now a doubt has been created as to whether these lands at all belong to the Government of Mysore. Why I say this is because at the time of retrocession when the assigned tract was transferred to the Government of Mysore, there was an order by the Government of India that all the lands which were then in possession of the army and the air force were transferred to the Government of India temporarily for a temporary period and negotiations were to be started by the Government of Mysore with the Government of India for their transfer back to the Mysore Government. I am sorry to state that till today the matter has not been settled. This is a matter which pertains to the Home Department and so I would like Sri Poonacha to kindly consider this question. I understand that certain correspondence has gone on between the Government of Mysore and the Government of India. A very long time has elapsed after this that we are now forgetting this issue. I think it is too late to be settled now. This matter should have been settled long back. At least I would like to know what has happened in this behalf. Why I am mentioning this is because I was present when the discussion about this took place with the Deputy Minister for Defence at the Air Commodore's residence and that is why I am interested to know the outcome of the negotiations. I find that no final conclusion has been arrived at in this matter. I feel that as Government we must take certain difinite decisions. We must not be evasive, but we must be firm in these matters.

I feel jealous when I see the developments in the neighbouring States where Finance Corporations have been formed. Has our Government thought of forming a Finance Corporation like that? We are now considering the budget and so I want to say that the formation of a Finance Corporation for the State of Mysore is a vital and urgent necessity.

Next I want to ask the Industries Minister Sri Poonacha why he has not constituted Boards for running the Government concerns efficiently in consonance with the policy of the Government of India. Such independent Boards are necessary for running the Government Soap Factory, the Government Electric Factory, the Government Porcelain Factory and other concerns. It has come to my knowledge from authoritative sources that we are incurring a loss in running the Porcelain Factory. I had referred to this matter some time back and I expect a very authoritative and correct reply to that. If what is stated is true, then is it not because we have gone out of the way and we are not acting in conformity with the policy laid down by the Government of India for constituting Boards to run these industrial concerns?

